ಮೈಸೂರು ವಿಶ್ವವಿದ್ಯಾನಿಲಯ

# ಯುವರಾಜ ಕಾಲೇಜು

**ಜೆ.ಎಲ್.ಬಿ.ರಸ್ತೆ, ಮೈಸೂರು – 560 005**

(ವಿಶ್ವವಿದ್ಯಾನಿಲಯದ ಸಾಮರ್ಥ್ಯವರ್ಧಿತ ಉತ್ಕೃಷ್ಟಜ್ಞಾನ ಸ್ವಾಯತ್ತತಾ ಕಾಲೇಜು)

(ನ್ಯಾಕ್‌ನಿಂದ ಸಿಜಿಪಿಎ **3.34** 'ಎ' ದರ್ಜೆ ಮಾನ್ಯತೆ ದೊರೆತಿದೆ)



<u>ಸ್ನಾತಕ ಪದವಿ ಕೋರ್ಸುಗಳ</u>

## ಬಿ.ಎಸ್ಸಿ, ಬಿ.ಬಿ.ಎ ಮತ್ತು ಬಿ.ಸಿ.ಎ

# ಮಾಹಿತಿ ಪುಸ್ತಕ– ೨೦೧೮–೨೦೧೯

**Rs. 300.-00**

## ಪ್ರಾಂಶುಪಾಲರ ನುಡಿ

ಸಮೃದ್ಧ ಇತಿಹಾಸವನ್ನು ಹೊಂದಿರುವ ಯುವರಾಜ ಕಾಲೇಜು ಮೈಸೂರು ವಿಶ್ವವಿದ್ಯಾನಿಲಯದ ನಾಲ್ಕು ಅನುಬಂಧಿತ ಕಾಲೇಜುಗಳಲ್ಲಿ ಒಂದಾಗಿದೆ. 1928ರ ಜೂನ್ 24 ರಂದು ಪ್ರಥಮ ಬಾರಿಗೆ ಇಂಟರ್ ಮೀಡಿಯೇಟ್ ಕಾಲೇಜಾಗಿ ಸಂಸ್ಥಾಪನೆಗೊಂಡು ರಾಷ್ಟ್ರ ಸ್ವಾತಂತ್ರ್ಯಾನಂತರ ಅಂದರೆ 1947–48 ರಲ್ಲಿ ಬಿ.ಎಸ್ಸಿ ಶಿಕ್ಷಣವನ್ನು ಪ್ರಾರಂಭಿಸಿ, ಪ್ರಥಮ ದರ್ಜೆ ಕಾಲೇಜೆಂದು ಉನ್ನತೀಕರಣಗೊಂಡಿತು. 1954ರ ನವೆಂಬರ್ 30ರಂದು ತನ್ನ ಸಾರ್ಥಕ ಬೆಳ್ಳಿ ಹಬ್ಬವನ್ನು ಆಚರಿಸಿಕೊಂಡಿತು. ಆ ಸಂದರ್ಭದಲ್ಲಿ 1934 ರಿಂದ 1936ರ ಅವಧಿಯಲ್ಲಿ ಈ ಕಾಲೇಜಿನಲ್ಲಿ ಕಲಿತ ಶ್ರೀ ಜಯಚಾಮರಾಜ ಒಡೆಯರ್ ಅವರು ರಜತಮಹೋತ್ಸವ ಸಮಾರಂಭವನ್ನು ಉದ್ಘಾಟಿಸಿದರು. ರಾಜಕುಮಾರರಾಗಿ ವಿದ್ಯಾರ್ಥಿಯಾಗಿದ್ದವರು ಮಹಾರಾಜರಾಗಿ ಕುಲಾಧಿಪತಿಗಳಾಗಿದ್ದು, ಈ ಉತ್ಸವವನ್ನು ನೆರವೇರಿಸಿದ ಸ್ಮರಣೆಗಾಗಿ ಮಾತ್ರವಲ್ಲದೆ, ಮಹಾರಾಜ ಕಾಲೇಜಿನ ಪಕ್ಕದ ಈ ಕಾಲೇಜಿಗೆ **"ಯುವರಾಜ ಕಾಲೇಜು"** ಎಂದು ಮರುನಾಮಕರಣಗೊಂಡು ಕರೆದುದು ಈಗ ಅರ್ಥಪೂರ್ಣವಾಯಿತು. ಇಂಥ ಕಾಲೇಜು ಪ್ರತಿಷ್ಠಿತ ಅಧ್ಯಯನ ಕೇಂದ್ರವಾಗಿ ಉನ್ನತ ಶಿಕ್ಷಣಕ್ಕೆ ತನ್ನದೇ ಕೊಡುಗೆಯನ್ನು 1947 ರಿಂದಲೂ ನೀಡುತ್ತಾ ಬಂದಿದೆ. (Pre-medical course)ಈ ಶಿಕ್ಷಣ ಸಂಸ್ಥೆ ಅನೇಕ ವರ್ಷಗಳ ಕಾಲ ಪೂರ್ವವೈದ್ಯ ಶಿಕ್ಷಣ ತರಗತಿಗಳನ್ನು ನಡೆಸಿಕೊಂಡು ಬಂದಿರುವ ಪ್ರತಿಷ್ಠೆಯನ್ನು ಕೂಡ ಹೊಂದಿರುತ್ತದೆ.

ಯುಜಿಸಿ ಕಾಯ್ದೆ 2(ಈ) ಮತ್ತು 12(೩)ಗಳ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ (UGC) ಕಾಯ್ದೆಯಡಿಯಲ್ಲಿ ಮತ್ತು ಕರ್ನಾಟಕ ಸರ್ಕಾರದ ಕಾಯ್ದೆಯಡಿಯಲ್ಲಿ ಮಾನ್ಯತೆ ಪಡೆದಿರುತ್ತದೆ. ಮಾನಸಗಂಗೋತ್ರಿಯಲ್ಲಿ ಅಧ್ಯಯನ ಕೇಂದ್ರಗಳು ಸ್ಥಾಪನೆಯಾಗುವ ಮುನ್ನ ದಿನಗಳಲ್ಲಿ ಇದೇ ಶಿಕ್ಷಣ ಸಂಸ್ಥೆಯಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನಗಳನ್ನು ಕೂಡ ನಡೆಸಿಕೊಂಡು ಬರಲಾಗುತ್ತಿತು. ಮೈಸೂರು ವಿಶ್ವವಿದ್ಯಾನಿಲಯದ ಅಂಗ ಕಾಲೇಜಾದ ಯುವರಾಜ ಕಾಲೇಜು ಇಡೀ ರಾಜ್ಯದಲ್ಲಿಯೇ ಬಿ.ಎಸ್ಸಿ ತರಗತಿಗಳನ್ನು ನಡೆಸಿಕೊಂಡು ಬರುತ್ತಿರುವ ಅತ್ಯಂತ ಹಳೆಯ ವಿಜ್ಞಾನ ಕಾಲೇಜಾಗಿದೆ. 2005ರಲ್ಲಿ ಈ ಕಾಲೇಜಿಗೆ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು **"ಸ್ವಾಯತ್ತ ಶಿಕ್ಷಣ ಸಂಸ್ಥೆಯ"** ಸ್ಥಾನಮಾನವನ್ನು ನೀಡಿದೆ. **"ರಾಷ್ಟ್ರೀಯ ಶಿಕ್ಷಣ ಮೌಲ್ಯಮಾಪನ ಮತ್ತು ಮೌಲ್ಯನಿಗಧೀಕರಣ ಸಮಿತಿಯು"** (NAAC) 2015–16ನೇ ಶಿಕ್ಷಣ ಸಾಲಿನಲ್ಲಿ ಮೂರನೆಯ ಸಲ ಭೇಟಿಯಿತ್ತು ತನ್ನ ನಾಲ್ಕು ಗುಣಾತ್ಮಕ ಮಾಪನದಡಿಯಲ್ಲಿ ಪುನರ್ ಮೌಲ್ಯೀಕರಣ ನಡೆಸಿ 'ಎ' ಶ್ರೇಣಿಯೊಂದಿಗೆ CGPA 3.34 ಅಂಕ ನೀಡಿ ಸ್ಥಾನ ನಿಗದೀಕರಣಗೊಳಿಸಿದೆ. ಅನೇಕ ಸಂವತ್ಸರಗಳಿಂದಲೂ ಈ ಕಾಲೇಜು ಶಿಕ್ಷಣದ ಉನ್ನತೀಕರಣವನ್ನು ಸಾಧಿಸಲು ಸಂಶೋಧನೆ, ಬೋಧನೆ ಮತ್ತು ಶಿಕ್ಷಣ ವಿಸ್ತರಣಾ ಕಾರ್ಯದಲ್ಲಿ ತೊಡಗಿಸಿಕೊಂಡಿದೆ. 2010ರಲ್ಲಿ ಯುಜಿಸಿಯಿಂದ **"ವಿಶ್ವವಿದ್ಯಾನಿಲಯದ ಸಾಮರ್ಥ್ಯವರ್ಧಿತ ಉತ್ಕೃಷ್ಟಜ್ಞಾನ ಸ್ವಾಯತ್ತತಾ ಸಂಸ್ಥೆ"**–ಎಂದು ಪರಿಗಣಿತವಾಗಿದೆ. ಪ್ರಸ್ತುತ ಶಿಕ್ಷಣ ಸಾಲಿನಲ್ಲಿ ಈ ಕಾಲೇಜು ತನ್ನ ಶೈಕ್ಷಣಿಕ ಕಾರ್ಯ ಚಟುವಟಿಕೆಗಳನ್ನು ಈ ಕೆಳಕಂಡ ಪದವಿಗಳ ಅಧ್ಯಯನದಲ್ಲಿ ತೊಡಗಿಸಿಕೊಂಡಿದೆ. ಅವುಗಳೆಂದರೆ ಅಣುಜೀವಶಾಸ್ತ್ರ ಎಂ.ಎಸ್ಸಿ., (ಐದುವರ್ಷಗಳ ಇಂಟಿಗ್ರೇಟೆಡ್ ಕೋರ್ಸ್) ಎಂ.ಎಸ್ಸಿ., (ರಸಾಯನಶಾಸ್ತ್ರ ಭೌತಶಾಸ್ತ್ರ–ಸಸ್ಯಶಾಸ್ತ್ರ–ಗಣಿತಶಾಸ್ತ್ರ, ರೇಷ್ಮೇಕೃಷಿ ವಿಜ್ಞಾನ, ಆಹಾರವಿಜ್ಞಾನ) ಎಂ.ಬಿ.ಎ ಮತ್ತು ಎಂ.ಎ ಇಂಗ್ಲೀಷ್ ಬಿ.ಎಸ್ಸಿ., ಬಿ.ಸಿ.ಎ., ಬಿ.ಬಿ.ಎ. ಹಾಗೂ ಪಿಹೆಚ್‌ಡಿ ಅಧ್ಯಯನ ವಿಷಯಗಳಾಗಿವೆ. ಪ್ರಸಕ್ತ ಸಾಲಿನಲ್ಲಿ ಈ ಪ್ರತಿಷ್ಠಿತ ಕಾಲೇಜು ತನ್ನ ರಾಷ್ಟ್ರದ 89ನೇ ವರ್ಷದ ಶೈಕ್ಷಣಿಕ ಸೇವೆಯಲ್ಲಿ ತೊಡಗಿಸಿಕೊಂಡಿದೆ. ಅಷ್ಟೇ ಅಲ್ಲದೆ ಈ ಕಾಲೇಜು ವಿದ್ಯಾರ್ಥಿಗಳಲ್ಲಿ ತಮ್ಮ ಶೈಕ್ಷಣಿಕ ಉನ್ನತೀಕರಣ ತಲುಪುವ ವಿದ್ಯಾದಾಹ, ಮಾನವೀಯ ಮೌಲ್ಯ, ಸದ್ಗುಣಸಂಪನ್ನತೆ, ಆಧ್ಯಾತ್ಮ ಮನೋಭಾವ, ನೀತಿಜ್ಞಾನ ಮೂಡಿಸುವಲ್ಲಿ ನಿರಂತರವಾಗಿ ಶ್ರಮಿಸುತ್ತಿದೆ. ನಿರಂತರವಾದ ತನ್ನ ಬೆಳವಣಿಗೆಯಲ್ಲಿ ಒದಗಿ ಬಂದ ಅನೇಕ ಕುಂದು ಕೊರತೆಗಳನ್ನು ನೀಗಿಸಿಕೊಂಡು ಯಶಸ್ವಿಯಾಗಿ ಮುಂದುವರೆಯುವಲ್ಲಿ ತನ್ನ ಶೈಕ್ಷಣಿಕ ಸ್ಥಾನಮಾನ ಮತ್ತು ಶಕ್ತಿಯೊಂದಿಗೆ, ಇಂದು ಪೂರ್ಣವಿಕಸಿತವಾದ ಶ್ರೇಷ್ಠ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿ; ಜ್ಞಾನ ಮತ್ತು ಉನ್ನತ ಶಿಕ್ಷಣದಲ್ಲಿ ತನ್ನ ಶ್ರೇಷ್ಠ ಸಾಧನೆಗಳಲ್ಲಿ ತೊಡಗಿಸಿಕೊಂಡಿದೆ.

ಡಾ.ಆರ್.ಗಣೇಶ
ಪ್ರಾಂಶುಪಾಲರು

******

## ಕಾಲೇಜಿನ ಲಾಂಛನ

**ಯುವರಾಜ ಕಾಲೇಜಿಗೆ** ಪ್ರತ್ಯೇಕವಾದ ಹಲವು ವೈಶಿಷ್ಟ್ಯತೆಗಳನ್ನೊಳಗೊಂಡ ಸುಂದರ ಲಾಂಛನವಿದೆ. ಈ ಲಾಂಛನವು ರಾಷ್ಟ್ರಧ್ವಜ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಲಾಂಛನದಲ್ಲಿನ ಒಂದೊಂದು ಸೂಕ್ಷ್ಮ ಪ್ರಮುಖ ಅಂಶಗಳನ್ನು ತನ್ನೊಳಗೆ ಉಳಿಸಿಕೊಂಡು ಅರ್ಥವಂತಿಕೆಯಲ್ಲಿ ತನ್ನದೆ ಆದ ವಿಶಿಷ್ಟತೆಯನ್ನು ಮೆರೆದಿದೆ. **'ಸತ್ಯಧರ್ಮಪ್ರತಿಷ್ಠಿತಃ'** ಎಂಬ ಸಂಸ್ಕೃತ ಶ್ಲೋಕವೊಂದರ ಸಾಲು ಈ ಲಾಂಛನದ ಧ್ಯೇಯವಾಕ್ಯವಾಗಿದೆ. ಅಂದರೆ **ಸತ್ಯದಲ್ಲಿಯೇ ಧರ್ಮವೂ ನೆಲೆಗೊಂಡಿದೆ''** ಸಂಗಮಗೊಳ್ಳಬೇಕೆಂಬ ಆಶಯವನ್ನು ಇದು ಶ್ರುತ ಪಡಿಸಿದೆ. ಲಾಂಛನದ ನಡುವೆ ಬೆಳಗುವ ನಂದಾದೀಪವೊಂದು ಪರಿಪೂರ್ಣ ಜ್ಞಾನಜ್ಯೋತಿಯಂತೆ ಪ್ರಜ್ವಲಿಸುತ್ತಿದೆ. **'ಅಶೋಕ ಚಕ್ರ'**ವು ವಿದ್ಯಾರ್ಥಿ ಮತ್ತು ಅಧ್ಯಾಪಕರಿಬ್ಬರು ಸೃಜನಶೀಲರಾಗಿ ಕಾರ್ಯತತ್ಪರತೆಯನ್ನು ಮೈಗೂಡಿಸಿಕೊಂಡು ಸದಾ ಜಾಗೃತರಾಗಿ ಕರ್ತವ್ಯ ನಿರ್ವಹಿಸಬೇಕೆಂಬುದನು , ಜೊತೆಗೆ ಸರ್ವ ಧರ್ಮ ಸಮನ್ವಯತೆಯನ್ನು ಸಾರುವಂತಿದೆ.

### ಧ್ಯೇಯ:

- ಅರ್ಥಪೂರ್ಣ ಶೈಕ್ಷಣಿಕ ವಾತಾವರಣ ಮೂಲಕ ವಿದ್ಯಾರ್ಥಿಗಳು ಅನುಭವ ಹಾಗೂ ಅವಕಾಶಗಳನ್ನು ಬೆಳವಣಿಗೆಗಾಗಿ ಉಪಯೋಗಿಸಿ ತಮ್ಮ ಉತ್ತಮ ಭವಿಷ್ಯ ನಿರ್ಮಿಸಿಕೊಳ್ಳುವ ಅವಕಾಶವನ್ನು ಒದಗಿಸುವುದು.
- ವಿದ್ಯಾರ್ಥಿಗಳಲ್ಲಿ ಸಾಮಾಜಿ-ಕಳಕಳಿ, ಮಾನವಹಕ್ಕು ಮತ್ತು ಕರ್ತವ್ಯಗಳು ಮತ್ತು ಅಗತ್ಯ ಮಾನವಿಕ ಮೌಲ್ಯಗಳನ್ನು ರೂಢಿಸಲು ಅವಕಾಶವನ್ನು ಒದಗಿಸುವುದು.

ಗುರಿ:

- ಭೌತಿಕ ಚಟುವಟಿಕೆಗಳ ಕೇಂದ್ರವನ್ನಾಗಿ ಪರಿವರ್ತಿಸುವುದು.
- ಪ್ರವಚನ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಮಾದರಿ ಪದ್ಧತಿಗಳು ಹಾಗೂ ಸನ್ಮಾರ್ಗಗಳನ್ನು ಅಳವಡಿಸುವುದರ ಮೂಲಕ ಪರಿಸರಸ್ನೇಹಿ ವಾತಾವರಣ ನಿರ್ಮಾಣ ಮಾಡುವುದು.

### ಕಾಲೇಜಿನ ವಿವಿಧ ಅಧ್ಯಯನ ವಿಭಾಗಗಳು:

**ಎ) ಸ್ನಾತಕ ಪದವಿಗಳು :**

1) ಬಿ.ಎಸ್ಸಿ
2) ಬಿಬಿಎ
3) ಬಿಸಿಎ

**ಬಿ) ಸ್ನಾತಕೋತ್ತರ ಪದವಿಗಳು**

1) ಭೌತಶಾಸ್ತ್ರ
2) ರಸಾಯನಶಾಸ್ತ್ರ
3) ಸಸ್ಯಶಾಸ್ತ್ರ
4) ಇಂಗ್ಲೀಷ್
5) ಅಣುಜೀವಶಾಸ್ತ್ರ
6) ಗಣಿತಶಾಸ್ತ್ರ
7) ಎಂಬಿಎ
8) ಆಹಾರ ವಿಜ್ಞಾನ
9) ರೇಷ್ಮೆವಿಜ್ಞಾನ

**ಸಿ) ಸಂಶೋಧನಾ ಮತ್ತು ಪಿಹೆಚ್.ಡಿ ಅಧ್ಯಯನ:**

ಈ ಕಾಲೇಜು 32 ಮಂದಿ ವಿಶ್ವವಿದ್ಯಾನಿಲಯ ಪರಿಗಣಿತ ಮಾರ್ಗದರ್ಶಕರನ್ನು ಹೊಂದಿದೆ. ಪ್ರಸ್ತುತ ಈ ಮಾರ್ಗದರ್ಶಕರು 110 ಜನ ಸಂಶೋಧಕರಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಈಗಾಗಲೇ 131ಕ್ಕೂ ಹೆಚ್ಚು ಮಂದಿ ಪಿಹೆಚ್. ಡಿ ಪದವಿಗಳನ್ನು ಪಡೆದಿರುತ್ತಾರೆ.

# ಯುವರಾಜ ಕಾಲೇಜು, ಮೈಸೂರು
## ಮೈಸೂರು ವಿಶ್ವವಿದ್ಯಾನಿಲಯ

**ವಿದ್ಯಾರ್ಥಿ ಕ್ಷೇಮಪಾಲನ ವಿಭಾಗ**

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯಲ್ಲಿ ವಿದ್ಯಾರ್ಥಿ ಕ್ಷೇಮಪಾಲನೆಯ ಒಂದು ಪ್ರತ್ಯೇಕ ನಿರ್ದೇಶನಾಲಯವಿದೆ. ಇದು ಶೈಕ್ಷಣಿಕ ಮತ್ತು ವಿಷಯಗಳ ಬಗ್ಗೆ ಮಾಹಿತಿಯನ್ನು, ವಿದ್ಯಾರ್ಥಿನಿಲಯಗಳ ನಿರ್ವಹಣೆ ಹಾಗೂ ಮಾರ್ಗದರ್ಶನವನ್ನು ಒದಗಿಸಿ ಕೊಡುತ್ತಿದೆ. ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿಗೆ ಆದ್ಯತೆ ಕೊಡಲಾಗಿದೆ. ಅಂಗವಿಕಲರಿಗೆ ಧನಸಹಾಯ ಕಾರ್ಯಕ್ರಮಗಳನ್ನು ಆಯೋಜಿಸಿ ನಿರ್ವಹಿಸುತ್ತದೆ. ಇದಲ್ಲದೆ ಪ್ರತ್ಯೇಕ ಚಟುವಟಿಕೆಗಳಾದ ಸಾಹಿತ್ಯಕ, ಸಾಂಸ್ಕೃತಿಕ ಸ್ಪರ್ಧೆಗಳು, ಅಂತರಕಾಲೇಜು, ಅಂತರ ವಿಶ್ವವಿದ್ಯಾನಿಲಯ ಮಟ್ಟದ ಸ್ಪರ್ಧೆಗಳು ಹಾಗೂ ಯುವಜನೋತ್ಸವ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.

**ವಿದ್ಯಾರ್ಥಿನಿಲಯಗಳು**

ಮೈಸೂರು ವಿಶ್ವವಿದ್ಯಾನಿಲಯದ ನಿಯಂತ್ರಣಕ್ಕೆ ಹದಿನೈದಕ್ಕೂ ಹೆಚ್ಚು ವಿದ್ಯಾರ್ಥಿನಿಲಯಗಳು ಒಳಪಟ್ಟಿವೆ. ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗಾಗಿ ಏಳು ವಿದ್ಯಾರ್ಥಿನಿಲಯಗಳು, ಸ್ನಾತಕ ವಿದ್ಯಾರ್ಥಿಗಳಿಗೆ ಐದು ವಿದ್ಯಾರ್ಥಿ ನಿಲಯಗಳು ಹಾಗೂ ಪದವಿ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಿದ್ಯಾರ್ಥಿನಿಲಯವಿದ್ದು, ವಿದ್ಯಾರ್ಥಿನಿಯರಿಗೆ ಅವಕಾಶ ಕಲ್ಪಿಸಿ ಕೊಡಲಾಗುತ್ತಿದೆ. ಮಹಿಳಾ ಉದ್ಯೋಗಿಗಳಿಗಾಗಿ ಪ್ರತ್ಯೇಕವಾದ ಉದ್ಯೋಗಸ್ಥ ಮಹಿಳಾ ವಸತಿನಿಲಯವನ್ನು ಜೊತೆಗೆ ದೈಹಿಕ ಶಿಕ್ಷಣ ಸಂಸ್ಥೆಗೆ ಸೇರಿದ ಪ್ರತ್ಯೇಕ ವಿದ್ಯಾರ್ಥಿನಿಲಯವು ಕಾರ್ಯವನ್ನು ನಿರ್ವಹಿಸುತ್ತಿವೆ. ಸ್ನಾತಕೋತ್ತರ ಕೇಂದ್ರಗಳಾದ ಚಾಮರಾಜನಗರ, ಮಂಡ್ಯ ಹಾಗೂ ಹಾಸನದಲ್ಲಿಯೂ ವಿದ್ಯಾರ್ಥಿನಿಲಯಗಳಿವೆ.

**ಕ್ರೀಡಾಚಟುವಟಿಕೆಗಳು**

ಮೈಸೂರು ವಿಶ್ವವಿದ್ಯಾನಿಲಯವು ಪ್ರತ್ಯೇಕವಾದ ದೈಹಿಕ ಶಿಕ್ಷಣ ನಿರ್ದೇಶನಾಲಯವನ್ನು ಒಳಗೊಂಡು ವಿದ್ಯಾರ್ಥಿಗಳ ಕ್ರಿಯಾಶೀಲತೆಗಾಗಿ ಕ್ರೀಡಾ ಚಟುವಟಿಕೆಗಳನ್ನು ನಡೆಸುತ್ತಿದೆ. ಕ್ರೀಡೆಗೆ ಸಂಬಂಧಿಸಿದಂತೆ ಒಳಾಂಗಣ ಮತ್ತು ಹೊರಾಂಗಣವೆಂಬ ವ್ಯಾಪಕ, ವಿಸ್ತಾರ ಕ್ರೀಡಾಂಗಣಗಳಿವೆ. ಮಾನಸಗಂಗೋತ್ರಿಯ ಸ್ನಾತಕೋತ್ತರ ಆವರಣದಲ್ಲಿ ಒಂದು ಬೃಹತ್ ಕ್ರಿಕೆಟ್ – ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ. ವಾಲಿಬಾಲ್, ಫುಟ್ಬಾಲ್, ಅಥ್ಲೇಟ್, ದೈಹಿಕ ವ್ಯಾಯಾಮಗಳು, ಕ್ರಿಕೆಟ್, ಹಾಕಿ ಮುಂತಾದ ಕ್ರೀಡೆಗಳನ್ನು ಕಲಿಸಲು ನುರಿತ ತರಬೇತುದಾರರಿದ್ದಾರೆ. ಈಜುವ ಆಸಕ್ತರಿಗೆ ಸುಸಜ್ಜಿತವಾದ ಈಜುಕೊಳ ಹೀಗೇ ಸ್ತ್ರೀ ಪುರುಷ ಕ್ರೀಡಾಸಕ್ತರಿಗೆ ಎಲ್ಲಾ ಬಗೆಯ ಸೌಕರ್ಯ – ಸವಲತ್ತುಗಳನ್ನು ನೀಡಲಾಗುತ್ತಿದೆ.

**ಸಾಂಸ್ಕೃತಿಕ / ಪಠ್ಯೇತರ ಚಟುವಟಿಕೆಗಳು**

ಮೈಸೂರು ವಿಶ್ವವಿದ್ಯಾನಿಲಯ ಪಠ್ಯೇತರ ಚಟುವಟಿಕೆಗಳಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಲು ಮಹಾರಾಜ ಮತ್ತು ಯುವರಾಜ ಕಾಲೇಜಿನ ಆವರಣದಲ್ಲಿರುವ ಶತಮಾನೋತ್ಸವ ಭವನ, ಸ್ನಾತಕೋತ್ತರ ಆವರಣದಲ್ಲಿನ ಮಾನವಿಕ ಸಭಾಂಗಣ, ರಾಣಿಬಹದ್ದೂರ್ ಸಭಾಂಗಣ ಹಾಗೂ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣಗಳು ಮೈಸೂರು ವಿಶ್ವವಿದ್ಯಾನಿಲಯದ ಪ್ರೇಕ್ಷಕ ಗೃಹಗಳಾಗಿವೆ. ಇಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸ್ಪರ್ಧೆ, ಚರ್ಚೆ, ಉಪನ್ಯಾಸ, ಹಾಡುಗಾರಿಕೆ, ಸಂಗೀತ, ನಾಟಕ, ಪ್ರಹಸನ, ವಿವಿಧ ವೇಷಗಳ ಸ್ಪರ್ಧೆ ಮತ್ತಿತರ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಮುಕ್ತ ಅವಕಾಶಗಳಿವೆ. ಮಾನಸಗಂಗೋತ್ರಿಯಲ್ಲಿರುವ ವಿಶಾಲ ಬಯಲುರಂಗಮಂದಿರದಲ್ಲಿ ಎಲ್ಲಾ ಬಗೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.

**ಅಂಚೆ ಸೌಲಭ್ಯ**

ಮೈಸೂರು ವಿಶ್ವವಿದ್ಯಾನಿಲಯವು ಉದ್ಯೋಗಿಗಳ ಮತ್ತು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕ್ರಾಫರ್ಡ್ ಭವನದ ಆವರಣ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಆವರಣಗಳಲ್ಲಿ ಅಂಚೆ ಕಛೇರಿಗಳನ್ನು ತೆರೆದು, ಅಂಚೆ ಸೌಲಭ್ಯ ಕಲ್ಪಿಸಲಾಗಿದೆ.

**ಬ್ಯಾಂಕಿಂಗ್ ಸೌಲಭ್ಯ**

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್‌ಭವನ ಹಾಗೂ ಸ್ನಾತಕೋತ್ತರ ಕೇಂದ್ರದ ಆವರಣದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಗಳನ್ನು ತೆರೆದು ಮೈಸೂರು ವಿಶ್ವವಿದ್ಯಾನಿಲಯದ ಎಲ್ಲಾ ವಿದ್ಯಾರ್ಥಿಗಳಿಗೂ ಹಾಗೂ ನೌಕರರಿಗೂ ಎಲ್ಲಾ ರೀತಿಯ ಸೌಲಭ್ಯ ನೀಡುತ್ತಿದ್ದಾರೆ.

**ಸಾರಿಗೆ ಸೌಲಭ್ಯ**

ಮೈಸೂರು ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿಯು ಕೇಂದ್ರ ಬಸ್ ನಿಲ್ದಾಣದಿಂದ ಸುಮಾರು ಮೂರು ಕಿಲೋಮೀಟರ್ ಹಾಗೂ ನಗರ ರೈಲ್ವೆ ನಿಲ್ದಾಣದಿಂದ ಸುಮಾರು 1.5 ಕಿಲೋಮೀಟರ್ ದೂರವಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಮೈಸೂರು ನಗರದ ಎಲ್ಲಾ ಭಾಗಗಳಿಂದಲೂ ಸುಮಾರು ಇಪ್ಪತ್ತರಿಂದ ಮೂವತ್ತು ನಿಮಿಷಗಳ ಅಂತರದಲ್ಲಿ ಬಸ್ಸುಗಳು ಸ್ನಾತಕೋತ್ತರ ಕೇಂದ್ರ ಹಾಗೂ ಯುವರಾಜ ಮತ್ತು ಮಹಾರಾಜ ಕಾಲೇಜಿನ ಬಳಿಗೆ ಬರುವಂತೆ ಏರ್ಪಾಟು ಮಾಡಲಾಗಿದೆ.

**ಉದ್ಯೋಗ ಮಾಹಿತಿ ಕೇಂದ್ರ**

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯಲ್ಲಿರುವ ಉದ್ಯೋಗ ಮಾಹಿತಿ ಹಾಗೂ ಮಾರ್ಗದರ್ಶನ ಕೇಂದ್ರ ಕಛೇರಿಯು ಲಘು ಪ್ರಕಟಣೆ ಮತ್ತು ಕಿರು ಹೊತ್ತಿಗೆಗಳನ್ನು ಪ್ರಕಟಿಸುವುದರ ಮೂಲಕ ಶೈಕ್ಷಣಿಕ ವಿಷಯಗಳಿಗೆ ಹಾಗೂ ಉದ್ಯೋಗಿಗಳಿಗೆ ನಿಖರ ಮಾಹಿತಿಗಳನ್ನು ಒದಗಿಸುತ್ತಿದೆ. ಬೇರೆ ವಿಶ್ವವಿದ್ಯಾನಿಲಯಗಳಲ್ಲಿರುವ ಹಾಗೂ ಹೊರ ರಾಷ್ಟ್ರಗಳಲ್ಲಿರುವ ಶೈಕ್ಷಣಿಕ ವಿಷಯಗಳ ಬಗ್ಗೆಯೂ ಇಲ್ಲಿ ಸ್ಪಷ್ಟ ಮಾಹಿತಿ ನೀಡಲಾಗುತ್ತಿದೆ. ವೃತ್ತಿಪರ ಹಾಗೂ ಸ್ನಾತಕೋತ್ತರ ಪದವೀಧರರು ಉದ್ಯೋಗಾವಕಾಶಗಳಿಗಾಗಿ ತಮ್ಮ ತಮ್ಮ ಹೆಸರುಗಳನ್ನು ಈ ಕಛೇರಿಯಲ್ಲಿ ನೋಂದಾಯಿಸಿಕೊಳ್ಳಬಹುದಾಗಿದೆ. ಹೆಸರನ್ನು ನೋಂದಾಯಿಸಿ ಅಭ್ಯರ್ಥಿಗೆ ಅವರ ಓದಿಗೆ ತಕ್ಕಂತಹ ಕೆಲಸದ ಬಗ್ಗೆ ಮಾಹಿತಿ ದೊರಕಿದರೆ, ಅದನ್ನು ಅಭ್ಯರ್ಥಿಗಳಿಗೆ ಅಂಚೆಯ ಮೂಲಕ ತಿಳಿಸಲಾಗುತ್ತದೆ. ಆಸಕ್ತರು ತಮಗೆ ಬೇಕಾದ ಕ್ಷೇತ್ರವನ್ನು ಉದ್ಯೋಗಕ್ಕೆ ಆರಿಸಿಕೊಳ್ಳಬಹುದಾಗಿದೆ. ಈ ಉದ್ಯೋಗ ಮಾಹಿತಿ ಕಛೇರಿಯು ಪಾರದರ್ಶಕವಾಗಿ ಕಾರ್ಯ ನಿರ್ವಹಿಸುತ್ತಿದೆ.

**ವಿದ್ಯಾರ್ಥಿವೇತನಗಳು**

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬುದ್ಧಿವಂತ, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗ, ಅಲ್ಪ ಸಂಖ್ಯಾತರು ಹಾಗೂ ಹಿಂದುಳಿದ ವರ್ಗಗಳ ಅರ್ಹವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದೆ. ಅಂಗವಿಕಲರಿಗೆ, ವಿಶೇಷ ವಿದ್ಯಾರ್ಥಿಗಳಿಗೆ ಹಾಗೂ ರಕ್ಷಣಾಖಾತೆಯ ನೌಕರರ ಮಕ್ಕಳು ವಿದ್ಯಾರ್ಥಿವೇತನಗಳನ್ನು ಸರ್ಕಾರದಿಂದ ಪಡೆಯಬಹುದಾಗಿದೆ. ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಹಲವು ಮಹನೀಯರು ನೀಡಿರುವ ದತ್ತಿ ಬಹುಮಾನಗಳೂ ಇವೆ. ಎಲ್ಲಾ ವರ್ಗದ ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಪಡೆಯಬಹುದಾಗಿದೆ.

**ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ವಿಶೇಷ ಘಟಕ**

ಅನುಸೂಚಿತ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಸಂಶೋಧಕರ ಮತ್ತು ಉದ್ಯೋಗಿಗಳ ಯೋಗಕ್ಷೇಮವನ್ನು ಪರಿಶೀಲಿಸಲು ಪ್ರತ್ಯೇಕವಾದ ಪರಿಶಿಷ್ಟ ಜಾತಿ/ಪಂಗಡ ವಿಶೇಷ ಘಟಕವನ್ನು ಹೊಂದಿದೆ. ಈ ಘಟಕದ ಮೂಲಕ ಸ್ನಾತಕೋತ್ತರ ಪದವಿ ಶಿಕ್ಷಣ ಮುಗಿಸಿರುವ ವಿದ್ಯಾರ್ಥಿಗಳನ್ನು ವಿಭಾಗವಾರು ಆಯ್ಕೆ ಮಾಡಿ, ಪ್ರತಿ ವರ್ಷವೂ 25 ವಿದ್ಯಾರ್ಥಿಗಳಿಗೆ 4ವರ್ಷದ ಅವಧಿಗೆ ಸಂಶೋಧನಾ ಶಿಷ್ಯವೇತನವನ್ನು ನೀಡಲಾಗುತ್ತದೆ. ಅಲ್ಲದೆ ಪ್ರೌಢಪ್ರಬಂಧಕ್ಕೆ ಧನಸಹಾಯ ಮತ್ತು ವಿದ್ಯಾರ್ಥಿನಿಲಯದಲ್ಲಿಲ್ಲದ ವಿದ್ಯಾರ್ಥಿಗಳಿಗೆ ಕೊಠಡಿ ಬಾಡಿಗೆ ನೀಡಲಾಗುತ್ತದೆ. ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ಸರ್ಕಾರ ನೀಡುವ ವಿದ್ಯಾರ್ಥಿವೇತನದೊಂದಿಗೆ ವಿಶ್ವವಿದ್ಯಾನಿಲಯ ರೂ.300/–ಗಳನ್ನು ನೀಡಿ ಉತ್ತಮ ಊಟವನ್ನು ನೀಡಲಾಗುತ್ತದೆ. ಪಿಎಚ್.ಡಿ. ಪದವಿ ಪಡೆದ ಪರಿಶಿಷ್ಟ ಜಾತಿ/ಪಂಗಡದ ಸಂಶೋಧನಾ ವಿದ್ಯಾರ್ಥಿಗಳನ್ನು ಪರಿಶಿಷ್ಟ ಜಾತಿ/ಪಂಗಡದ ವಿಶೇಷ ಘಟಕದ ವತಿಯಿಂದ ಗೌರವಿಸಿ ಸನ್ಮಾನಿಸಲಾಗುತ್ತದೆ.

**ವಿದೇಶಿ ವಿದ್ಯಾರ್ಥಿಗಳ ಘಟಕ**

ಮೈಸೂರು ವಿಶ್ವವಿದ್ಯಾನಿಲಯವು ವಿದೇಶಿ ವಿದ್ಯಾರ್ಥಿಗಳ ಘಟಕವನ್ನು ಲಲಿತಕಲಾ ಕಾಲೇಜು ಮಾನಸಗಂಗೋತ್ರಿ, ಮೈಸೂರು ಇಲ್ಲಿ ಮಾಡಲಾಗಿದೆ. ಈ ಘಟಕದಲ್ಲಿ ವಿದೇಶಿ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಮತ್ತು ವಸತಿ ಸೌಲಭ್ಯ ನೀಡುವುದರ ಜೊತೆಗೆ ವಿದೇಶಿ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದ ಕೆಲಸ ಕಾರ್ಯಗಳ ನಿರ್ವಹಣೆಯನ್ನು ಈ ಘಟಕವು ನಿರ್ವಹಿಸುತ್ತಿದೆ.

# ಯುವರಾಜ ಕಾಲೇಜು (ಸ್ವಾಯತ್ತ)

## ಸಹಕಾರಿ ಸೇವೆಗಳು

**ಅ) ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿನಿಲಯಗಳ ಸೌಲಭ್ಯಗಳು**

ಯುವರಾಜ ಕಾಲೇಜಿನ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಈ ಕೆಳಕಂಡ ವಿದ್ಯಾರ್ಥಿನಿಲಯಗಳ ಸೌಲಭ್ಯಗಳನ್ನು ಪಡೆಯಲು ವಿದ್ಯಾರ್ಥಿನಿಲಯಗಳ ಶಿಕ್ಷಕ ಸಲಹೆಗಾರರನ್ನು ಸಂಪರ್ಕಿಸಿ ಅರ್ಜಿ ಪಡೆದು, ವಿದ್ಯಾರ್ಥಿನಿಲಯಗಳಿಗೆ ಪ್ರವೇಶಾತಿಯನ್ನು ಪಡೆಯಬಹುದಾಗಿದೆ.

1. ಯುವರಾಜ ಕಾಲೇಜಿನ ವಿದ್ಯಾರ್ಥಿನಿಲಯ
2. ವಿಶ್ವವಿದ್ಯಾನಿಲಯ ವಿದ್ಯಾರ್ಥಿನಿಲಯ–2
3. ಯುವರಾಜ ಕಾಲೇಜು ಮಹಿಳಾ ವಿದ್ಯಾರ್ಥಿನಿಲಯ
4. ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ, ಮಾನಸಗಂಗೋತ್ರಿ

**ಆ) ಗ್ರಂಥಾಲಯ ಮತ್ತು ವಾಚನಾಲಯ**

ಸ್ನಾತಕ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗಾಗಿ ವಿಸ್ತಾರವಾದ ಗ್ರಂಥಾಲಯ ಇದೆ. ಅಧ್ಯಾಪಕರು ವಿದ್ಯಾರ್ಥಿಗಳು ತಮ್ಮ ಬುದ್ಧಿಶಕ್ತಿಗಳಿಗನುಗುಣವಾಗಿ ಈ ಗ್ರಂಥಭಂಡಾರವನ್ನು ಉಪಯೋಗಿಸಿಕೊಳ್ಳುತ್ತಾರೆ. ಇಂಟರ್‌ನೆಟ್ ಮೂಲಕ 2100 ಇ ನಿಯತಕಾಲಿಕೆಗಳು ಹಾಗೂ 5100 ಇ ಪುಸ್ತಕಗಳ ಬಗ್ಗೆ ಗ್ರಂಥಾಲಯದ ಸಿಬ್ಬಂದಿ ವರ್ಗದವರಿಂದ ಮಾಹಿತಿಯನ್ನು ಪಡೆಯಬಹುದಾಗಿದೆ. ಗ್ರಂಥಾಲಯದ ಪಕ್ಕದಲ್ಲಿ ವಿದ್ಯಾರ್ಥಿಗಳ ವಾಚನಾಲಯ ಇದೆ. ವಿದ್ಯಾರ್ಥಿ/ವಿದ್ಯಾರ್ಥಿನಿಯರು ಇದರ ಉಪಯೋಗವನ್ನು ಪಡೆಯ ಬಹುದಾಗಿದೆ.

**ಇ) ಸಸ್ಯೋದ್ಯಾನ**

ಸಸ್ಯಶಾಸ್ತ್ರ ಮತ್ತು ಜೀವಶಾಸ್ತ್ರ ವಿದ್ಯಾರ್ಥಿಗಳಿಗಾಗಿ ಕಾಲೇಜಿನಲ್ಲಿ ಉತ್ಕೃಷ್ಟವಾದ, ವಿವಿಧ ಮಾದರಿಯ ಸಸ್ಯಗಳನ್ನೊಳಗೊಂಡ ಸಸ್ಯೋದ್ಯಾನವನ್ನು ಹೊಂದಿರುತ್ತದೆ. ವೈಜ್ಞಾನಿಕ ಶಾಸ್ತ್ರೀಯ ಹಿನ್ನಲೆಯಲ್ಲಿ ಹಸಿರಾಗಿ ಸಸ್ಯೋದ್ಯಾನವನ್ನು ನಿರ್ವಹಿಸಲಾಗುತ್ತಿದೆ ಕಾಲೇಜಿನ ಸಸ್ಯೋದ್ಯಾನ ಅಲಂಕಾರಿಕ ಗಿಡಗಳು, ಹೂ ಗಿಡಗಳು ಮತ್ತು ಔಷಧಿಯ ಸಸ್ಯಗಳನ್ನು ಹೊಂದಿದ್ದು ಕಾಲೇಜಿನ ವಾತಾವರಣ, ಹಸಿರುಮಯವಾಗಿದೆ.

**ಈ) ಉಚಿತ ಆರೋಗ್ಯ ಕೇಂದ್ರ**

ಮೈಸೂರು ವಿಶ್ವವಿದ್ಯಾನಿಲಯವು ಮಹಾರಾಜ ಮತ್ತು ಯುವರಾಜ ಕಾಲೇಜಿನ ವಿದ್ಯಾರ್ಥಿ/ವಿದ್ಯಾರ್ಥಿನಿಯರುಗಳಿಗಾಗಿ ಹಾಗೂ ವಿಶ್ವವಿದ್ಯಾನಿಲಯದ ನೌಕರರೆಲ್ಲರಿಗೂ ನವೀಕೃತಗೊಂಡ ಪ್ರತ್ಯೇಕ ಆರೋಗ್ಯ ಕೇಂದ್ರ ಮಹಾರಾಜ ಕಾಲೇಜಿನ ಹಾಗು ಮಾನಸಗಂಗೋತ್ರಿಯ ಆವರಣದಲ್ಲಿದೆ. ಪ್ರತೀ ಆರೋಗ್ಯ ಕೇಂದ್ರದಲ್ಲಿ ಇಬ್ಬರು ತಜ್ಞ ವೈದ್ಯರು ಹಾಗು ದಾದಿಯರಿದ್ದು, ಉಚಿತ ಮಾತ್ರೆ, ಔಷಧಿ, ಇಂಜೆಕ್ಷನ್‌ಗಳನ್ನು ನೀಡಲಾಗುತ್ತದೆ. ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ನೌಕರರ ಕುಟುಂಬ ವರ್ಗದವರೂ ಸಹ ಇದರ ಸದುಪಯೋಗವನ್ನು ಪಡೆದುಕೊಳ್ಳ ಬಹುದಾಗಿದೆ.

**ಉ) ಭಾಷಾ ಪ್ರಯೋಗಾಲಯ**

ಭಾಷಾ ಪ್ರಯೋಗಾಲಯ ಸೌಕರ್ಯವನ್ನು ವಿದ್ಯಾರ್ಥಿಗಳಿಗೆ ಒದಗಿಸಲಾಗಿದೆ. ಕಲಿಯುವಿಕೆಯ ಹಂತದಲ್ಲಿ ಗ್ರಾಮಂತರ ಪ್ರದೇಶದಿಂದ ಬಂದವರೇ ಜಾಸ್ತಿಯಿರುವ ಕಾರಣ, ಭಾಷಾ ಪ್ರಯೋಗಾಲಯ ಮೂಲಕ ಭಾಷಾ ಕಲಿಕೆ ಉತ್ತಮಪಡಿಸಿಕೊಳ್ಳುವಿಕೆ ಸಾಧ್ಯವಾಗಿದೆ.

**ಊ) ಭಾಷಾ ವಿಷಯದ ಬಗ್ಗೆ**

ಕನ್ನಡ, ಇಂಗ್ಲಿಷ್, ಸಂಸ್ಕೃತ, ಹಿಂದಿ, ಉರ್ದು ಭಾಷೆ ಕಲಿಸುವುದರೊಂದಿಗೆ ಇನ್ನಿತರ ಭಾಷೆಗಳಾದ ಪರ್ಷಿಯನ್, ಅರೇಬಿಕ್, ತಮಿಳು, ತೆಲುಗು, ಮಲೆಯಾಳಂ, ಫ್ರೆಂಚ್, ಜರ್ಮನಿ ಮತ್ತು ಪ್ರಾಕೃತ ಭಾಷೆಗಳನ್ನು ಸ್ವಂತಕ್ಕೆ ಓದಿಕೊಂಡು ಪರೀಕ್ಷೆ ಬರೆಯಲು ಅವಕಾಶವನ್ನು ಕಲ್ಪಿಸಲಾಗಿದೆ.

**ಋ) ರಾಷ್ಟ್ರೀಯ ಯುವ ಸೇವಾದಳ (ಎನ್.ಸಿ.ಸಿ.)**

ಯುವ ವಿದ್ಯಾರ್ಥಿಗಳಲ್ಲಿ ಧೈರ್ಯ, ಸ್ಥೈರ್ಯ, ಆತ್ಮ ವಿಶ್ವಾಸವನ್ನು ತುಂಬಿ ಅವರನ್ನು ಈ ದೇಶದ ಸಧೃಡ ಸತ್ಪ್ರಜೆಗಳನ್ನಾಗಿ, ಉತ್ತಮ ನಾಗರಿಕರನ್ನಾಗಿ ರೂಪಿಸಲು ಈ ಘಟಕವನ್ನು ಸ್ಥಾಪಿಸಲಾಗಿದೆ. ಯುವರಾಜ ಕಾಲೇಜಿನಲ್ಲಿ

ಎನ್.ಸಿ.ಸಿ.ಯ ಭೂಸೈನ್ಯ, ನೌಕಾದಳ ಮತ್ತು ವಾಯುದಳಗಳೆಂಬ ಪ್ರತ್ಯೇಕ ಘಟಕಗಳಿವೆ. ಕಾಲೇಜಿನ ವಿದ್ಯಾರ್ಥಿಗಳು ಇವುಗಳಲ್ಲಿ ಯಾವುದಾದರೂ ಒಂದು ಶಾಖೆಗೆ ಮಾತ್ರ ಸೇರಲು ಅವಕಾಶವನ್ನು ಕಲ್ಪಿಸಿಕೊಡಲಾಗಿದೆ.

**ಎ) ರಾಷ್ಟ್ರೀಯ ಸೇವಾ ಯೋಜನೆ (ಎನ್.ಎಸ್.ಎಸ್.)**

ಯುವರಾಜ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಘಟಕವು ಅಸ್ತಿತ್ವದಲ್ಲಿದೆ. ವಿದ್ಯಾರ್ಥಿಗಳಲ್ಲಿ, ಶಿಸ್ತು, ಸಂಯಮ, ಸೇವಾ ಮನೋಭಾವ, ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ವಿದ್ಯಾರ್ಥಿಗಳು ಯಾವ ರೀತಿಯಲ್ಲಿ ಬೆಳೆಸಿಕೊಳ್ಳಬೇಕೆಂಬುದರ ಬಗ್ಗೆ, ವಿದ್ಯಾರ್ಥಿಗಳಿಗೆ ತಿಳುವಳಿಕೆ, ಜಾಗೃತಿಯನ್ನು ಮೂಡಿಸುವ ಕೆಲಸವನ್ನು ರಾಷ್ಟ್ರೀಯ ಸೇವಾ ಯೋಜನೆಯು ಮಾಡುತ್ತಿದೆ. ಕಾಲೇಜಿನ ಒಳಗೆ ಮತ್ತು ಹೊರಗೆ ವಿದ್ಯಾರ್ಥಿಗಳು ಕಾರ್ಯಕ್ರಮಾಧಿಕಾರಿಗಳ ನೇತೃತ್ವದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಚಟುವಟಿಕೆಗಳನ್ನು ನಡೆಸಲು ಅವಕಾಶವಿದೆ. ಇದಲ್ಲದೆ ಜಿಲ್ಲಾಮಟ್ಟ ಅಂತರ ಕಾಲೇಜು, ಅಂತರ ವಿಶ್ವವಿದ್ಯಾನಿಲಯ ಮಟ್ಟದ ಶಿಬಿರಗಳಲ್ಲಿ ಮತ್ತು ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಭಾಗವಹಿಸಲು ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶವನ್ನು ಕಲ್ಪಿಸಲಾಗುವುದು.

**ಏ) ಉಪಹಾರ ಮಂದಿರ**

ಕಾಲೇಜಿನ ಆವರಣದಲ್ಲಿ ಒಂದು ಸುಂದರವಾದ ಉಪಹಾರ ಮಂದಿರವನ್ನು ಸುಸಜ್ಜಿತವಾಗಿ ನಿರ್ಮಿಸಿದೆ. ಇದರ ಸೌಲಭ್ಯವನ್ನು ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಬಳಸಿಕೊಳ್ಳಬಹುದಾಗಿದೆ.

**ಐ) ವೈ–ಫೈ**

ಕಾಲೇಜಿನಲ್ಲಿ 1.0 GBPS ಸಾಮರ್ಥ್ಯದ ವೈ–ಫೈ ವ್ಯವಸ್ಥೆಯನ್ನು ಕಾಲೇಜಿನಲ್ಲಿ ಕಲ್ಪಿಸಲಾಗಿದೆ.

**ಒ) ಸಹಕಾರ ಸಂಘ**

ಯುವರಾಜ ಕಾಲೇಜಿನ ಒಳಾಂಗಣದಲ್ಲಿ, ಕಾಲೇಜಿನ ವಿದ್ಯಾರ್ಥಿಗಳ ಷೇರು ಬಂಡವಾಳವನ್ನು ಉಪಯೋಗಿಸಿಕೊಂಡು ಸಹಕಾರ ಸಂಘವೊಂದನ್ನು ನಡೆಸಲಾಗುತ್ತಿದೆ. ಈ ಸಂಘದ ಸದುದ್ದೇಶವೆಂದರೆ ವಿದ್ಯಾರ್ಥಿಗಳಿಗೆ ಅತ್ಯಗತ್ಯವಾದ ಪ್ರಯೋಗಿಕ ದಾಖಲೆ ಪುಸ್ತಕ ಮತ್ತು ಇನ್ನಿತರ ಪಠ್ಯಕ್ರಮಕ್ಕೆ ಅನುಗುಣವಾದ ಸಾಮಾಗ್ರಿಯನ್ನು ಸುಲಭ ಬೆಲೆಗೆ ಪೂರೈಸುವುದು. ಆ ಲೇಖನ ಸಾಮಾಗ್ರಿಗಳ ಮೇಲೆ ಯುವರಾಜ ಕಾಲೇಜಿನ ಲಾಂಛನ ಮುದ್ರೆ ಇರುತ್ತದೆ.

**ಓ) ಉದ್ಯೋಗ ಕೇಂದ್ರ**

ಕಾಲೇಜಿನಲ್ಲಿ ಉದ್ಯೋಗ ಮಾಹಿತಿ ಘಟಕವಿದ್ದು, ಯಶಸ್ಸಿನಿಂದ ಕಾರ್ಯನಿರ್ವಹಿಸುತ್ತಿದೆ. ಉದ್ಯೋಗಕ್ಕೆ ಸಂಬಂಧಿಸಿದ ಮಾಹಿತಿ, ತರಬೇತಿ, ಕಾರ್ಯಗಾರಗಳನ್ನು ವಿದ್ಯಾರ್ಥಿಗಳಿಗೆ ನಡೆಸುತ್ತಿದೆ. ಉದ್ಯೋಗ ಮಾಹಿತಿ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲು, ಪಯುಕ್ತ ಸಭೆಗಳನ್ನು ನಡೆಸುತ್ತಿದೆ.

**ಕಾಲೇಜಿನ ಶಿಸ್ತಿಗೆ ಸಂಬಂಧಿಸಿರುವ ನಿಯಮಗಳು**

- ಈ ಕಾಲೇಜಿಗೆ ಸೇರುವ ಎಲ್ಲಾ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಪ್ರೌಢರು, ಹೊಣೆಗಾರಿಕೆ ಅರಿತವರೆಂದು ಪರಿಗಣಿಸಲಾಗುತ್ತದೆ ಮತ್ತು ಅವರೆಲ್ಲರೂ ಎಲ್ಲಾ ವಿಚಾರದಲ್ಲಿ ಸಭ್ಯತೆಯಿಂದ ವರ್ತಿಸುತ್ತಾರೆಂಬುದನ್ನು ನಿರೀಕ್ಷಿಸಲಾಗುತ್ತದೆ.
- ವಿದ್ಯಾರ್ಥಿ/ವಿದ್ಯಾರ್ಥಿನಿಯರು ವಿಶ್ವವಿದ್ಯಾನಿಲಯ/ಕಾಲೇಜು, ಕಾಲಕಾಲಕ್ಕೆ ರೂಪಿಸಿ, ಪ್ರಕಟಿಸುವ ನಿಯಮ ನಿಬಂಧನೆಗಳಿಗೆ ಬದ್ಧರಾಗಿ ಅವುಗಳಿಗೆ ತಕ್ಕಂತೆ ನಡೆದುಕೊಳ್ಳಬೇಕು.
- ಹಾಜರಾತಿಯನ್ನು ಕಡ್ಡಾಯಗೊಳಿಸಲಾಗಿದೆ.
- ವಿದ್ಯಾರ್ಥಿಗಳು ಅಧ್ಯಯನಕ್ಕೆ ಬೇಕಾದ ಪಠ್ಯಪುಸ್ತಕ, ಪ್ರಯೋಗಿಕ ದಾಖಲೆ ಪುಸ್ತಕ ಇತ್ಯಾದಿಗಳನ್ನು ಪ್ರತಿದಿನ ತಪ್ಪದೆ ತರತಕ್ಕದ್ದು.
- ವಿದ್ಯಾರ್ಥಿಗಳು ಕಾಲೇಜಿನಲ್ಲಿ ಶಿಕ್ಷಕರು, ಕಛೇರಿ ಹಾಗೂ ಗ್ರಂಥಾಲಯದ ಸಿಬ್ಬಂದಿ, ಸಹಪಾಠಿ ಹಾಗೂ ಸಾರ್ವಜನಿಕರ ವಿಷಯದಲ್ಲಿ ನಮ್ರತೆಯಿಂದ ಹಾಗೂ ಸಭ್ಯತೆಯಿಂದ ನಡೆದುಕೊಳ್ಳಬೇಕು.
- ಕಾಲೇಜಿನ ಆವರಣ, ಗ್ರಂಥಾಲಯ, ವಾಚನಾಲಯ, ಮೊಗಸಾಲೆ, ಪ್ರಯೋಗಶಾಲೆ ಮತ್ತು ತರಗತಿ ಕೊಠಡಿಗಳನ್ನು ಮತ್ತು ಕಾಲೇಜಿನ ಆಸ್ತಿಪಾಸ್ತಿಗಳನ್ನೂ ರಕ್ಷಣೆ ಮಾಡಬೇಕು ಹಾಗೂ ಕಾಲೇಜಿನ ಆವರಣದಲ್ಲಿ ನಿಃಶಬ್ದತೆ ಮತ್ತು ಶುದ್ಧತೆ ಕಾಪಾಡಬೇಕು.
- ಕಾಲೇಜಿನ ಆವರಣದಲ್ಲಿ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಧರಿಸಬೇಕು.
- ರ್‍ಯಾಗಿಂಗ್ ಮತ್ತು ಅಶಿಸ್ತಿನ ಗಂಭೀರ ಚಟುವಟಿಕೆಗಳನ್ನು ತೀವ್ರವಾದ ಅಪರಾಧಗಳನ್ನಾಗಿ ಪರಿಗಣಿಸಿ ಬಿಗಿಯಾದ ಕ್ರಮಗಳನ್ನು ಜರುಗಿಸಲಾಗುವುದು.

- ಕಾಲೇಜಿನಲ್ಲಿ ಹೊರಡಿಸುವ ಪ್ರಕಟಣೆಗಳಿಗೆ ಸಂಬಂಧಿಸಿದಂತೆ ಕಾಲೇಜಿನ ಅಥವಾ ಇಲಾಖೆಗಳ ಪ್ರಕಟಣಾ ಫಲಕವನ್ನು ಪ್ರತಿದಿನವೂ ತಪ್ಪದೆ ನೋಡಬೇಕಾದುದು ಪ್ರತಿ ವಿದ್ಯಾರ್ಥಿ/ವಿದ್ಯಾರ್ಥಿನಿಯ ಹೊಣೆಗಾರಿಕೆ.
- ಸೂಕ್ತ ಮಾರ್ಗದರ್ಶನಕ್ಕಾಗಿ ವಿದ್ಯಾರ್ಥಿ/ವಿದ್ಯಾರ್ಥಿನಿಯರು ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿಯನ್ನು ಸಂಪರ್ಕಿಸಿ ಅವರಿಂದ ಸೂಕ್ತ ಮಾರ್ಗದರ್ಶನ ಪಡೆಯಬಹುದು.
- ವಿದ್ಯಾರ್ಥಿ/ವಿದ್ಯಾರ್ಥಿನಿಯರ ತಂದೆ ತಾಯಂದಿರು ತಮ್ಮ ಮಕ್ಕಳ ಶ್ರೇಯೋಭಿವೃದ್ಧಿಯನ್ನು ತಿಳಿಯಲು ಆಗಿಂದಾಗ್ಗೆ ಪ್ರಾಂಶುಪಾಲರನ್ನು ಹಾಗೂ ಸಂಬಂಧಪಟ್ಟ ಶಿಕ್ಷಕರನ್ನು ಭೇಟಿ ಮಾಡತಕ್ಕದ್ದು.
- ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ತಮಗೆ ನೀಡಿದ ಕೊಠಡಿಯಲ್ಲಿ ಇತರೆ ಅನಧಿಕೃತ ವ್ಯಕ್ತಿಗಳನ್ನು ಇರಿಸಿ ಕೊಂಡಿರುವುದು ಕಂಡು ಬಂದಲ್ಲಿ ಅಂತಹ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಕಾಲೇಜು ಪ್ರವೇಶಾತಿಯನ್ನು ಕೂಡಲೆ ರದ್ದುಪಡಿಸಲಾಗುವುದು.
- ಕಾಲೇಜಿನ ತರಗತಿಗಳಲ್ಲಿ ಹಾಗೂ ಆವರಣದಲ್ಲಿ ಮೊಬೈಲ್ ಬಳಕೆ ನಿಷಿದ್ಧವಾಗಿರುತ್ತದೆ. ನಿಯಮ ಮೀರಿದವರನ್ನು ಶಿಕ್ಷೆಗೆ ಗುರಿಪಡಿಸಿಲಾಗುವುದು.
- ಕಾಲೇಜಿನ ಆವರಣದಲ್ಲಿ ಧೂಮಪಾನ,ಮಾದಕ ಪದಾರ್ಥಗಳ ಸೇವನೆ ಸಂಪೂರ್ಣ ನಿಷೇಧಿಸಲಾಗಿದೆ.ಇದರ ಬಳಕೆ ಶಿಕ್ಷಾರ್ಹ ಅಪರಾಧ.
- ಕಾಲೇಜಿನಲ್ಲಿ ವಿದ್ಯಾರ್ಥಿಗಳು ತಮಗೆ ಒದಗಿಸಲಾಗಿರುವ ಸ್ಥಳದಲ್ಲೇ ತಮ್ಮ ವಾಹನಗಳನ್ನು ಸೂಕ್ತ ಶುಲ್ಕ ಪಾವತಿಸಿ,ಗುರುತಿನ ಚೀಟಿ ಪಡೆದು, ನಿಲುಗಡೆ ಮಾಡಬೇಕು.
- ವಿದ್ಯಾರ್ಥಿಗಳು ಸೂಕ್ತ ಶುಲ್ಕ ನೀಡಿ ಒಮ್ಮೆ ಪ್ರವೇಶಾತಿಯಾದ ನಂತರ,ಯಾವುದಾದರೂ ಕಾರಣದಿಂದ ತಮ್ಮ ಪ್ರವೇಶಾತಿಯನ್ನು ರದ್ದುಮಾಡಿಸಿಕೊಂಡಲ್ಲಿ,ಅಚಿತಹ ವಿದ್ಯಾರ್ಥಿಗಳು ಪ್ರವೇಶಾತಿ ಸಮಯದಲ್ಲಿ ಪಾವತಿಸಿರುವ ಹಣವನ್ನೂ ಹಿಂತಿರುಗಿಸಲಾಗುವುದಿಲ್ಲ.

**ಲೈಂಗಿಕ ದೌರ್ಜನ್ಯ/ಮಾನವ ಹಕ್ಕುಗಳ ಉಲ್ಲಂಘನೆ/ಕಾಲೇಜಿನಲ್ಲಿ ನಡೆಯುವ ರ್‍ಯಾಗಿಂಗ್ ಘಟನೆಗಳಿಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಕ್ರಮಗಳು**

ವಿದ್ಯಾರ್ಥಿಯು ಲೈಂಗಿಕ ದೌರ್ಜನ್ಯ/ಮಾನವ ಹಕ್ಕುಗಳ ಉಲ್ಲಂಘನೆ/ರ್‍ಯಾಗಿಂಗ್ ನಂತಹ ಒಳಸಂಚಿನಲ್ಲಿ ತೊಡಗಿದ್ದರೆ ಅಂತಹ ವಿದ್ಯಾರ್ಥಿಗಳ ಮೇಲೆ ಈ ಕೆಳಕಂಡ ಶಿಸ್ತುಕ್ರಮಗಳನ್ನು ಕಾಲೇಜಿನ ಆಡಳಿತ ಮಂಡಳಿ ಕೈಗೊಳ್ಳುತ್ತದೆ.

- ಶೈಕ್ಷಣಿಕಸೌಲಭ್ಯಗಳಿಂದ ಮತ್ತು ತರಗತಿಗೆ ಹಾಜರಾಗುವಂತಹ ಮೂಲಭೂತ ಸೌಲಭ್ಯಗಳಿಂದ ಉಚ್ಚಾಟಿಸಲಾಗುವುದು.
- ವಿದ್ಯಾರ್ಥಿವೇತನ ಅಥವಾ ಗೌರವಧನಗಳನ್ನು ಹಿಂಪಡೆದುಕೊಳ್ಳುವುದು ಅಥವಾ ತಡೆಹಿಡಿಯುವುದು.
  ಯಾವುದೇ ಬಗೆಯ ಪರೀಕ್ಷೆ ಅಥವಾ ಕಿರುಪರೀಕ್ಷೆಗೆ ಕೂರದಂತೆ ಹಾಗೂ ಇನ್ನಿತರ ಮೌಲ್ಯಮಾಪನ ಪ್ರಕ್ರಿಯೆಗಳಿಂದ ಅನರ್ಹಗೊಳಿಸಲಾಗುವುದು.
- ಫಲಿತಾಂಶವನ್ನು ತಡೆಹಿಡಿಯಲಾಗುವುದು.
- ಸಂಸ್ಥೆಯನ್ನು ಪ್ರತಿನಿಧಿಸುವ ಯಾವುದೇ ಪ್ರಾಂತೀಯ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಕ್ರೀಡಾಕೂಟದಲ್ಲಿ, ಸ್ಪರ್ಧೆಗಳಲ್ಲಿ, ಯುವಜನೋತ್ಸವಗಳಲ್ಲಿ ಪ್ರತಿನಿಧಿಸದಂತೆ ನಿರ್ಬಂಧ ವಿಧಿಸಿ ವಜಾಗೊಳಿಸಲಾಗುವುದು.
- ವಸತಿನಿಲಯಗಳಿಂದ ಹೊರಹಾಕಲಾಗುವುದು ಅಥವಾ ವಜಾಗೊಳಿಸಲಾಗುವುದು.
- ಪ್ರವೇಶಾತಿಯನ್ನು ಒಡನೆಯೇ ರದ್ದುಗೊಳಿಸಲಾಗುವುದು.

# ಸ್ನಾತಕ ಪದವಿ ವಿವರ

| ಕ್ರಮ ಸಂಖ್ಯೆ | ವಿಷಯ | ಪದವಿಯ ಕಾಲಾವಧಿ | ವಿದ್ಯಾರ್ಹತೆ |
|---|---|---|---|
| ೧ | ಬಿ.ಎಸ್ಸಿ. | ಮೂರು ವರ್ಷ–ಆರು ಚತುರ್ಮಾಸ | ವಿದ್ಯಾರ್ಥಿಯು ಎರಡು ವರ್ಷದ ಪಿಯುಸಿ ಪರೀಕ್ಷೆಯಲ್ಲಿ ವಿಜ್ಞಾನ ವಿಷಯವನ್ನು ತೆಗೆದುಕೊಂಡು, ಪಿಯುಸಿ ರಾಜ್ಯ ಸರ್ಕಾರದ ಕೇಂದ್ರ ಕಛೇರಿಯಿಂದ ಪದವಿಗೆ ಸೇರಲು ಅರ್ಹತಾ ಪ್ರಮಾಣ ಪತ್ರವನ್ನು (ಅಂಕಪಟ್ಟಿ) ಪಡೆದಿರಬೇಕು. ಅಂತಹವರು ಬಿ.ಎಸ್ಸಿ. ಪದವಿಗೆ ಸೇರಲು ಅರ್ಹರಾಗಿರುತ್ತಾರೆ. |
| ೨ | ಬಿ.ಸಿ.ಎ. | ಮೂರು ವರ್ಷ–ಆರು ಚತುರ್ಮಾಸ | ಪಿಯುಸಿಯಲ್ಲಿ ತೇರ್ಗಡೆಯಾದ, ಅರ್ಹ ವಿದ್ಯಾರ್ಥಿಗಳು ಗಣಿತದಲ್ಲಿ ಹೆಚ್ಚು ಅಂಕಗಳನ್ನು ಗಳಿಸಿದ್ದರೆ ಅಂತಹವರು ಬಿ.ಸಿ.ಎ ಪದವಿ ಸೇರಲು ಅರ್ಹರಾಗಿರುತ್ತಾರೆ. |
| ೩ | ಬಿ.ಬಿ.ಎ. | ಮೂರು ವರ್ಷ–ಆರು ಚತುರ್ಮಾಸ | ಎರಡು ವರ್ಷದ ಪಿಯುಸಿಯಲ್ಲಿ ವಾಣಿಜ್ಯಶಾಸ್ತ್ರ ವಿಷಯವನ್ನು ತೆಗೆದುಕೊಂಡು ತೇರ್ಗಡೆಯಾದ ವಿದ್ಯಾರ್ಥಿಗಳು ಈ ಪದವಿಗೆ ಸೇರಲು ಅರ್ಹರಾಗಿರುತ್ತಾರೆ. |

# ಬಿ.ಎಸ್ಸಿ. ಪದವಿಯ ಐಚ್ಛಿಕ ವಿಷಯಗಳು

| | | |
|---|---|---|
| 1 | BBM | ಜೀವರಸಾಯನಶಾಸ್ತ್ರ/ಸಸ್ಯಶಾಸ್ತ್ರ/ಸೂಕ್ಷ್ಮಜೀವಶಾಸ್ತ್ರ |
| 2 | BBZ | ಜೀವರಸಾಯನಶಾಸ್ತ್ರ/ಸಸ್ಯಶಾಸ್ತ್ರ/ಪ್ರಾಣಿಶಾಸ್ತ್ರ |
| 3 | BMBT | ಜೀವರಸಾಯನಶಾಸ್ತ್ರ/ಸೂಕ್ಷ್ಮಜೀವಶಾಸ್ತ್ರ /ಜೈವಿಕತಂತ್ರಜ್ಞಾನ |
| 4 | BZF | ಜೀವರಸಾಯನಶಾಸ್ತ್ರ/ಪ್ರಾಣಿಶಾಸ್ತ್ರ/ಆಹಾರ ವಿಜ್ಞಾನ ಮತ್ತು ಪೌಷ್ಟಕಾಂಶ |
| 5 | CBBT | ರಸಾಯನಶಾಸ್ತ್ರ / ಸಸ್ಯಶಾಸ್ತ್ರ / ಜೈವಿಕತಂತ್ರಜ್ಞಾನ |
| 6 | CBtEn, | ರಸಾಯನಶಾಸ್ತ್ರ/ ಜೈವಿಕತಂತ್ರಜ್ಞಾನ / ಪರಿಸರ ವಿಜ್ಞಾನ |
| 7 | CBM | ರಸಾಯನಶಾಸ್ತ್ರ/ಸಸ್ಯಶಾಸ್ತ್ರ/ಸೂಕ್ಷ್ಮಜೀವಶಾಸ್ತ್ರ |
| 8 | CBG | ರಸಾಯನಶಾಸ್ತ್ರ/ಸಸ್ಯಶಾಸ್ತ್ರ/ಭೂವಿಜ್ಞಾನ |
| 9 | CGEn | ರಸಾಯನಶಾಸ್ತ್ರ/ಭೂವಿಜ್ಞಾನ / ಪರಿಸರ ವಿಜ್ಞಾನ |
| 10 | CBZ | ರಸಾಯನಶಾಸ್ತ್ರ/ಸಸ್ಯಶಾಸ್ತ್ರ/ ಪ್ರಾಣಿಶಾಸ್ತ್ರ |
| 11 | CSBT | ರಸಾಯನಶಾಸ್ತ್ರ/ರೇಷ್ಮೆವಿಜ್ಞಾನ/ಜೈವಿಕತಂತ್ರಜ್ಞಾನ |
| 12 | CZBT | ರಸಾಯನಶಾಸ್ತ್ರ/ಪ್ರಾಣಿಶಾಸ್ತ್ರ/ ಜೈವಿಕತಂತ್ರಜ್ಞಾನ |
| 13 | CZS | ರಸಾಯನಶಾಸ್ತ್ರ/ಪ್ರಾಣಿಶಾಸ್ತ್ರ/ ರೇಷ್ಮೆ ವಿಜ್ಞಾನ |
| 14 | MSCS | ಗಣಿತಶಾಸ್ತ್ರ/ಸಂಖ್ಯಾ ವಿಜ್ಞಾನ/ಗಣಕ ವಿಜ್ಞಾನ |
| 15 | PCM | ಭೌತಶಾಸ್ತ್ರ/ರಸಾಯನಶಾಸ್ತ್ರ/ಗಣಿತಶಾಸ್ತ್ರ |
| 16 | PEM | ಭೌತಶಾಸ್ತ್ರ/ವಿದ್ಯುನ್ಮಾನಶಾಸ್ತ್ರ/ಗಣಿತಶಾಸ್ತ್ರ |
| 17 | PMCS | ಭೌತಶಾಸ್ತ್ರ/ಗಣಿತಶಾಸ್ತ್ರ/ಗಣಕ ವಿಜ್ಞಾನ |
| 18 | PMG | ಭೌತಶಾಸ್ತ್ರ/ಗಣಿತಶಾಸ್ತ್ರ/ಭೂ ವಿಜ್ಞಾನ |
| 19 | PMS | ಭೌತಶಾಸ್ತ್ರ/ಗಣಿತಶಾಸ್ತ್ರ/ಸಂಖ್ಯಾ ವಿಜ್ಞಾನ |

**ಬಿ.ಸಿ.ಎ. ಮತ್ತು ಬಿ.ಬಿ.ಎ. ಪದವಿ ಶ್ರೇಣಿ**

| | | |
|---|---|---|
| 1 | BCA | ಆನ್ವಯಿಕ ಗಣಕ ವಿಜ್ಞಾನ |
| 2 | BBA | ವ್ಯವಹಾರ ನಿರ್ವಹಣಾ ಶಾಸ್ತ್ರ |

**ಐಚ್ಛಿಕ ಭಾಷೆಗಳು :**

| |
|---|
| **ಕನ್ನಡ, ಇಂಗ್ಲೀಷ್, ಸಂಸ್ಕೃತ, ಹಿಂದಿ** |

# ಸ್ನಾತಕ ಶೈಕ್ಷಣಿಕ ವೇಳಾಪಟ್ಟಿ

## ಸ್ನಾತಕ ಪದವಿ ಮತ್ತು ಇತರೆ ಸ್ನಾತಕ ಡಿಪ್ಲೋಮಾ/ಪ್ರಮಾಣ ಪತ್ರ ಶ್ರೇಣಿ (ಚತುರ್ಮಾಸ ಮತ್ತು ವಾರ್ಷಿಕ) ೨೦೧೮-೧೯ನೇ ಶೈಕ್ಷಣಿಕ ವರ್ಷದ ದಿನಸೂಚಿ.

| ಕ್ರಮ.ಸಂ. | ವಿಷಯ | ಉದ್ದೇಶಿತ ದಿನಾಂಕ |
|---|---|---|
| 1 | ಕಾಲೇಜು ಆರಂಭಗೊಳ್ಳುವ ಶೈಕ್ಷಣಿಕ ವರ್ಷ ೨೦೧೮-೧೯ | 01-06-2018 |
| 2 | ಎಲ್ಲಾ ಚತುರ್ಮಾಸ ತರಗತಿಗಳು ಈ ವರ್ಷದಲ್ಲಿ ಪ್ರಾರಂಭಗೊಳ್ಳುತ್ತದೆ | 11-06-2018 |
| 3 | ಪ್ರವೇಶಾತಿಯ ಪ್ರಥಮ ಸೆಮಿಸ್ಟರ್‌ನ ಕೊನೆಯ ದಿನಾಂಕ | 25-06-2018 |
| 4 | ಪ್ರವೇಶಾತಿಯ ದಂಡ ಶುಲ್ಕದೊಂದಿಗೆ ಅಂತಿಮ ದಿನಾಂಕ | 30-06-2018 |
| 5 | ಈ ವರ್ಷದ ಚತುರ್ಮಾಸ ಪದ್ದತಿ ಕೊನೆಗೊಳ್ಳುವ ದಿನ | 12-10-2018 |
| 6 | ಮಧ್ಯಂತರ ರಜೆಯ ಕಾಲಾವಧಿ | 13-10-2018 ರಿಂದ 22-11-2018 |
| 7 | ಪರೀಕ್ಷೆಗಳು ಶುರುವಾಗುವ ದಿನಾಂಕ | 22-10-2018 |
| 8 | ಸಮ ಚತುರ್ಮಾಸ ತರಗತಿಗಳು ಆರಂಭವಾಗುವ ದಿನ | 23-11-2018 |
| 9 | ಚತುರ್ಮಾಸ ಪದ್ದತಿಯ ಕಡೆಯ ದಿನ | 23-03-2019 |
| 10 | ಬೇಸಿಗೆ ರಜೆಯ ಕಾಲಾವಧಿ | 25-03-2019 ರಿಂದ 30-05-2019 |
| 11 | ಪ್ರಾರಂಭಗೊಳ್ಳುವ ಪರೀಕ್ಷೆ | 01-04-2019 |
| 12 | ಕಾಲೇಜು ಪುನರಾರಂಭಗೊಳ್ಳುವ ಶೈಕ್ಷಣಿಕ ವರ್ಷ ೨೦೧೯-೨೦ | 01-06-2019 |

**ಸೂಚನೆ:** ೧.ನಿಯಮಿತ ಸಮಯದಲ್ಲಿ ರಜೆಯನ್ನು ಘೋಷಿಸಲಾದ ಸಂದರ್ಭದಲ್ಲಿ ಘಟನೆಯನ್ನು ಮುಂದಿನ ಕರ್ತವ್ಯ ದಿನಕ್ಕೆ ಪರಿಗಣಿಸಲಾಗುವುದು.

೨.ಪರೀಕ್ಷಾ ಸಂಬಂಧವಾದ ಪ್ರಕಟಣೆಗಳನ್ನು ಕುಲಸಚಿವರು ಪರೀಕ್ಷಾಂಗ ಮತ್ತು ಯುವರಾಜ ಕಾಲೇಜಿನ ಪರೀಕ್ಷಾ ನಿಯಂತ್ರಣಾಧಿಕಾರಿಗಳು ಆಗ್ಗಿಂದಾಗೆ ನೀಡುತ್ತಾರೆ.

೩.ಚತುರ್ಮಾಸ ಕೊನೆಗೊಳ್ಳುವ ದಿನಕ್ಕೆ ಎರಡು ವಾರಕ್ಕೆ ಮುಂಚಿತವಾಗಿಯೇ ಪಠ್ಯಕ್ರಮಗಳನ್ನು ಪೂರ್ಣಗೊಳಿಸಿ ಮತ್ತು ಅಧ್ಯಾಪಕರು ಸಂಬಂಧಿಸಿದ ಅಂತರ ಮೌಲ್ಯಮಾಪನ ಅಂಕದ ಪಟ್ಟಿಯನ್ನು ವಿಭಾಗದ ಮುಖ್ಯಸ್ಥರಿಗೆ ಚತುರ್ಮಾಸ ಕೊನೆಗೊಳ್ಳುವ ಪೂರ್ವದಲ್ಲಿಯೇ ತಪ್ಪದೇ ಸಲ್ಲಿಸುತ್ತಾರೆ.

## ಹಾಜರಾತಿ ಬಗ್ಗೆ ಬಿ.ಎಸ್ಸಿ./ಬಿ.ಸಿ.ಎ./ಬಿ.ಬಿ.ಎ. ಕೋರ್ಸ್‌ಗಳಿಗೆ

- ಹಾಜರಾತಿ ಪರಿಗಣನೆಗಾಗಿ ಪ್ರತಿ ಶೈಕ್ಷಣಿಕ ಚತುರ್ಮಾಸವನ್ನು ಒಂದು ಘಟಕವನ್ನಾಗಿ ತೆಗೆದುಕೊಳ್ಳಲಾಗುತ್ತದೆ. ಪ್ರತಿ ಚತುರ್ಮಾಸದಲ್ಲೂ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಪ್ರತಿ ವಿಷಯದಲ್ಲೂ ಪ್ರಾಯೋಗಿಕ ತರಗತಿಗಳನ್ನು ಒಳಗೊಂಡಂತೆ ಶೇಕಡ 75ಕ್ಕೆ ಕಡಿಮೆ ಇಲ್ಲದಂತೆ ಹಾಜರಾತಿ ಪಡೆದಿರಬೇಕು.
- ಈ ನಿಗದಿತ ಹಾಜರಾತಿ ಕಡಿಮೆ ಇರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪರೀಕ್ಷೆ ತೆಗೆದುಕೊಳ್ಳಲು ಅನುಮತಿ ನೀಡಲಾಗುವುದಿಲ್ಲ.
- ಶೈಕ್ಷಣಿಕ ವರ್ಷದ ಮಧ್ಯಭಾಗದಲ್ಲಿ ವಿಷಯ ಬದಲಾವಣೆಗೆ ಅನುಮತಿಯನ್ನು ನೀಡಿದ್ದರೆ ಆಗ ಆ ನಿರ್ದಿಷ್ಟ ವಿಷಯದಲ್ಲಿ ಬದಲಾವಣೆಗೆ ಅನುಮತಿ ನೀಡಿದ ದಿನದಿಂದ ಹಾಜರಾತಿಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.
- ಇಡೀ ಚತುರ್ಮಾಸ ಪದ್ದತಿಯ ಹಾಜರಾತಿಯನ್ನು ಪರಿಗಣನೆ ಮಾಡುವಾಗ, ವಿದ್ಯಾರ್ಥಿ/ವಿದ್ಯಾರ್ಥಿನಿಯರು ಹಿಂದ ತೆಗೆದುಕೊಂಡಿದ್ದ ವಿಷಯದಲ್ಲಿ ಹಾಜರಾಗಿದ್ದ ದಿನಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ.
- ಹಾಜರಾತಿಯ ಬಗ್ಗೆ ಕಾಲೇಜಿಗೆ ಪ್ರವೇಶಾತಿ ಪಡೆಯುವಾಗ ನಿರ್ದಿಷ್ಟವಾದ ನಮೂನೆಯಲ್ಲಿ ಮುಚ್ಚಳಿಕೆ ನೀಡಬೇಕು ಮತ್ತು ಅದಕ್ಕೆ ಬದ್ಧವಾಗಿರಬೇಕು.

### ಪರೀಕ್ಷೆಗಳು

ಬಿ.ಎಸ್ಸಿ., ಬಿ.ಸಿ.ಎ. ಮತ್ತು ಬಿ.ಬಿ.ಎ. ಪದವಿ ಪ್ರಾಯೋಗಿಕ ಪರೀಕ್ಷೆ ಹಾಗೂ ಲಿಖಿತ ಪರೀಕ್ಷೆಗಳನ್ನು ಪ್ರತಿ ಚತುರ್ಮಾಸದ ಕೊನೆಯಲ್ಲಿ ನಡೆಸಲಾಗುತ್ತದೆ.

# ವಿದ್ಯಾರ್ಥಿ/ವಿದ್ಯಾರ್ಥಿನಿಯರ ಗಮನಕ್ಕೆ

ಅ) ವಿದ್ಯಾರ್ಥಿ/ವಿದ್ಯಾರ್ಥಿನಿಯರು ಪದವಿ ಪೂರ್ವ ಹಂತದಲ್ಲಿ ಅಧ್ಯಯನ ಮಾಡಿರುವ ಭಾಷೆಗಳನ್ನು ಬಿ.ಎಸ್ಸಿ. (ಸಿ.ಬಿ.ಸಿ.ಎಸ್) ಪದವಿ ತರಗತಿಯಲ್ಲಿ ತೆಗೆದುಕೊಳ್ಳಬೇಕು. ಪದವಿ ಪೂರ್ವ ಹಂತದಲ್ಲಿ ಕನ್ನಡ ಭಾಷೆಯ ಅಧ್ಯಯನ ಮಾಡದಿದ್ದರೂ ಬಿ.ಎಸ್ಸಿ. ತರಗತಿಯಲ್ಲಿ ಆ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಲು ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಅವಕಾಶವಿದೆ. ಇಷ್ಟು ಮಾತ್ರವಲ್ಲದೆ, ಪದವಿ ಹಂತದಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯು ಅಧ್ಯಯನ ಮಾಡದೇ ಇರುವ ಭಾಷೆಯನ್ನು ಬಿ.ಎಸ್ಸಿ.ಯಲ್ಲಿ ತೆಗೆದುಕೊಳ್ಳುವುದಕ್ಕೆ ವಿಶ್ವವಿದ್ಯಾನಿಲಯ ಅನುಮತಿಯನ್ನು ನೀಡುತ್ತದೆ. ಆದರೆ, ವಿದೇಶಿ ವಿದ್ಯಾರ್ಥಿಗಳ ವಿಷಯದಲ್ಲಿ ವಿಶ್ವವಿದ್ಯಾನಿಲಯವು ಭಾರತೀಯ ಭಾಷೆಯೊಂದನ್ನು ಅಧ್ಯಯನ ಮಾಡಬೇಕೆಂಬ ನಿಯಮವನ್ನು ಮನ್ನಾ ಮಾಡಬಹುದಾಗಿದೆ. ಎರಡು ಭಾಷೆಗಳೊಂದಿಗೆ, ಭಾರತೀಯ ಭಾಷೆಯನ್ನು ಕಲಿಯುವುದು ಉತ್ತಮ.

(ಆ) ಐಚ್ಛಿಕ ವಿಷಯ ಬದಲಾವಣೆಗೆ ಸಂಬಂಧಿಸಿದಂತೆ, ವಿದ್ಯಾರ್ಥಿಗಳು ವೃತ್ತಿ ಸಂಬಂಧ ಪದವಿ ಕೋರ್ಸ್‌ಗೆ ಸೇರ್ಪಡೆಗೊಂಡ ನಂತರ ಐಚ್ಛಕ ವಿಷಯಗಳಲ್ಲಿ ಖಾಲಿ ಉಳಿದಿದ್ದರೆ ಅಂಕಗಳ ಅಧಾರದ ಮೇಲೆ (Merit) ಪ್ರವೇಶಾತಿ ಸಮಿತಿಯ ನಿರ್ಧಾರದಂತೆ ವಿವಿಧ ಐಚ್ಛಿಕ ವಿಷಯಗಳಿಗೆ ಭರ್ತಿಮಾಡಲಾಗುವುದು.

(ಇ) ವಿದ್ಯಾರ್ಥಿಗಳ ಪ್ರವೇಶಾತಿಯು ಕಾಲೇಜಿನ ನಿಬಂಧನೆಗೆ ಒಳಪಟ್ಟಿದೆ. ಯು.ಜಿ.ಸಿ. ನಿಯಮಾನುಸಾರ ವಿಷಯ ಸಮೂಹ ನಿಗದಿತ ಸಂಖ್ಯೆಯಲ್ಲಿ ಪ್ರವೇಶಾತಿ ಬಯಸಿ ವಿದ್ಯಾರ್ಥಿಗಳು ಬರದೇ ಇದ್ದಲ್ಲಿ ಅಂತಹ ವಿಷಯ ಸಮೂಹಗಳನ್ನು ರದ್ದುಗೊಳಿಸಿ ಬದಲಿ ವಿಷಯ ಸಮೂಹವನ್ನು ನೀಡಲಾಗುವುದು. ಪ್ರವೇಶಾತಿ ಇರದ ವಿಷಯ ಸಮೂಹವನ್ನು ಸದರಿ ಶೈಕ್ಷಣಿಕ ವರ್ಷದಲ್ಲಿ ಸ್ಥಗಿತ ಗೊಳಿಸಲಾಗುವುದು.

(ಈ) ಕಾಲೇಜಿನಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಆರಿಸಿಕೊಂಡಿರುವ ಭಾಷೆಯಲ್ಲಿ ಶಿಕ್ಷಣ ನೀಡಲು ಸೌಲಭ್ಯವಿಲ್ಲದಿದ್ದಾಗ, ವಿಶ್ವವಿದ್ಯಾನಿಲಯವು ಆ ಭಾಷೆಯನ್ನು ಖಾಸಗಿಯಾಗಿ ಅಧ್ಯಯನ ಮಾಡಿಕೊಳ್ಳುವುದಕ್ಕೆ ಸದರಿ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಅನುಮತಿಯನ್ನು ನೀಡಲಾಗುತ್ತದೆ. ಇಂತಹ ವಿದ್ಯಾರ್ಥಿಗಳಿಗೆ ಭಾಷೆಯ ವಿಷಯದಲ್ಲಿ ಹಾಜರಾತಿಯನ್ನು ಕಡ್ಡಾಯ ಮಾಡದೆ ಪರೀಕ್ಷೆ ತೆಗೆದುಕೊಳ್ಳಲು ಒಪ್ಪಿಗೆ ಕೊಡಲಾಗುವುದು. ವಿದ್ಯಾರ್ಥಿಗಳು ಪ್ರವೇಶ ಪಡೆಯುವ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯ ನಿಗಧಿಗೊಳಿಸುವ ಶುಲ್ಕವನ್ನು ಕಟ್ಟಬೇಕಾಗುತ್ತದೆ.

(ಉ) ಕಿವುಡು ವಿದ್ಯಾರ್ಥಿಗಳು ಗ್ರೂಪ್–1 ಭಾಷೆಯಲ್ಲಿ ಒಂದೇ ಒಂದು ಭಾಷೆಯನ್ನು ಆರಿಸಿಕೊಳ್ಳಬಹುದು.

**ಗಮನಿಸಬೇಕಾದ ಅಂಶಗಳು**

೧. (ಅ) ಅರ್ಹತಾ ಪರೀಕ್ಷೆಯಲ್ಲಿ ಅಭ್ಯರ್ಥಿಯು ಅಧ್ಯಯನ ಮಾಡಿ ತೇರ್ಗಡೆ ಹೊಂದಿದ ನಂತರ ಅರ್ಜಿ ಸಲ್ಲಿಸಿ ಲಭ್ಯವಿರುವ ಐಚ್ಛಿಕ ವಿಷಯಗಳ ಸಮೂಹಕ್ಕೆ ನೇರ ಸಂದರ್ಶನ/ಸಮಾಲೋಚನೆ ಮೂಲಕ ಪ್ರವೇಶಾತಿ ಪಡೆಯುವುದು.

(ಆ) ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರವನ್ನು ಬಿ.ಎಸ್ಸಿ.ಯಲ್ಲಿ ಅಧ್ಯಯನ ಮಾಡಲಿಚ್ಛಿಸುವ ಅಭ್ಯರ್ಥಿಯು ಅರ್ಹತಾ (ಪಿ.ಯು.ಸಿ.ಯಲ್ಲಿ) ಪರೀಕ್ಷೆಯಲ್ಲಿ ಗಣಿತವನ್ನು, ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರದೊಂದಿಗೆ (PCM) ಅಧ್ಯಯನ ಮಾಡಿರಬೇಕು.

(ಇ) ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ಮತ್ತು ಜೀವರಸಾಯನಶಾಸ್ತ್ರ (BBZ) ವನ್ನು ಬಿ.ಎಸ್ಸಿ. ಪದವಿ ತರಗತಿಯಲ್ಲಿ ಅಧ್ಯಯನ ಮಾಡಲಿಚ್ಛಿಸುವ ಅಭ್ಯರ್ಥಿಯು ಅರ್ಹತಾ ಪರೀಕ್ಷೆಯಲ್ಲಿ (ಪಿ.ಯು.ಸಿ.ಯಲ್ಲಿ) ಜೀವಶಾಸ್ತ್ರವನ್ನು ಅಧ್ಯಯನ ಮಾಡಿರಬೇಕು.

(ಈ) ಅರ್ಹತಾ ಪರೀಕ್ಷೆಯಲ್ಲಿ (ಪಿ.ಯು.ಸಿ.ಯಲ್ಲಿ) ಭೂಗರ್ಭಶಾಸ್ತ್ರ ಅಧ್ಯಯನ ಮಾಡದಿದ್ದರೂ ಬಿ.ಎಸ್ಸಿ. ಪದವಿ ತರಗತಿಯಲ್ಲಿ ಅದನ್ನು ಆಯ್ದುಕೊಳ್ಳಲು ಅಭ್ಯರ್ಥಿಗೆ ಅನುಮತಿ ನೀಡಲಾಗುವುದು.

(ಉ) ಬಿ.ಸಿ.ಎ. ಸ್ನಾತಕ ಪದವಿ ಕೋರ್ಸಿಗೆ ಅಧ್ಯಯನ ಮಾಡಲಿಚ್ಛಿಸುವ ಅಭ್ಯರ್ಥಿಯು ಅರ್ಹತಾ ಪರೀಕ್ಷೆಯಲ್ಲಿ (ಪಿ.ಯು.ಸಿ.ಯಲ್ಲಿ) ಗಣಿತವನ್ನು ಅಧ್ಯಯನ ಮಾಡಿರಬೇಕು.

೨. ವಿಶ್ವವಿದ್ಯಾನಿಲಯದ ಅನುಮತಿಯ ಮೇರೆಗೆ ಅರ್ಹತೆಯ ಆಧಾರದ ಮೇಲೆ ಪ್ರವೇಶ ದೊರೆಯದಿದ್ದವರಿಗೆ ಭಾಗಶಃ ಪೂರ್ಣ ಸ್ವಯಂ ಆರ್ಥಿಕ ಯೋಜನೆಯ ಅಡಿಯಲ್ಲಿ ಪ್ರವೇಶ ಪಡೆಯಲು ಅವಕಾಶವಿದೆ. ಅದಕ್ಕಾಗಿ ಉಚಿತವಾಗಿ ಕಾಲೇಜಿನ ಕಛೇರಿಯಿಂದ ಪಡೆಯಬಹುದಾದ ಪ್ರತ್ಯೇಕ ನಿಗದಿತ ನಮೂನೆಯ ಮೂಲಕ ಕೋರಿಕೆ ಸಲ್ಲಿಸಬೇಕು.

೩. ಭಾಷಾ ಪಠ್ಯಕ್ರಮವನ್ನು ಬಿ.ಎಸ್ಸಿ./ಬಿ.ಸಿ.ಎ./ಬಿ.ಬಿ.ಎ. ಕೋರ್ಸ್‌ಗಳಿಗೆ ಏಕರೂಪದಲ್ಲಿ ಸಿದ್ಧಪಡಿಸಿ ಬೋಧಿಸಿ ಪರೀಕ್ಷೆ ನಡೆಸಲಾಗುವುದು.

೪. ವಿದ್ಯಾರ್ಥಿಗಳು ಒಮ್ಮೆ ಪ್ರವೇಶ ಪಡೆದ ಮೇಲೆ ಯಾವುದೇ ಕಾರಣಕ್ಕೂ ಪ್ರವೇಶಾತಿಯ ಶುಲ್ಕವನ್ನು ಹಿಂತಿರುಗಿಸುವುದಿಲ್ಲ.

# ಪ್ರವೇಶಾತಿಗಾಗಿ ಅರ್ಜಿ ಸಲ್ಲಿಸುವ ವಿಧಾನ ಮತ್ತು ಪ್ರವೇಶಾತಿ

ವಿದ್ಯಾರ್ಥಿ/ವಿದ್ಯಾರ್ಥಿನಿಯರು ನಿಗದಿತ ಅರ್ಜಿ ಶುಲ್ಕವನ್ನು ಪಾವತಿಸಿ ಕಾಲೇಜಿನ ಕಛೇರಿಯಿಂದ ಅರ್ಜಿ ಪಡೆದು ಅದನ್ನು ಸರಿಯಾಗಿ ಭರ್ತಿ ಮಾಡಿ ನಿಗದಿತ ಅವಧಿಯಲ್ಲಿ ಕಾಲೇಜಿಗೆ ಸಲ್ಲಿಸಬೇಕು.

೧. ಅರ್ಜಿ ಪಡೆಯುವಾಗ ನಿಗದಿತ ಅರ್ಜಿ ಶುಲ್ಕವನ್ನು ಸಲ್ಲಿಸಿರುವ ಬಗ್ಗೆ ಪಡೆದ ಮೂಲ ರಶೀತಿಯನ್ನು ಅರ್ಜಿ ಸಲ್ಲಿಸುವಾಗ ಅರ್ಜಿಯೊಂದಿಗೆ ಲಗತ್ತಿಸಿರಬೇಕು.

೨. ಅಭ್ಯರ್ಥಿಗಳು ಗ್ರೂಪ್ ೨ರಲ್ಲಿ ಗರಿಷ್ಠ ಸಂಖ್ಯೆಯ **ನಾಲ್ಕು ಐಚ್ಛಿಕ** ವಿಷಯಗಳನ್ನು ಆದ್ಯತೆಯ ಮೇರೆಗೆ ನಮೂದಿಸಬೇಕು.

೩. ಪ.ಜಾ., ಪ.ಪಂ ವರ್ಗ ೧, ವರ್ಗ ೨ಎ, ೨ಬಿ, ೩ಎ ಮತ್ತು ೩ಬಿ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸುವಾಗ, **೫ ವರ್ಷ ಚಾಲ್ತಿಯಲ್ಲಿರುವ ಅಥವ ೧–೪–೨೦೧೮ ನಂತರ** ಪಡೆದ ಸಂಬಂಧಿಸಿದ ಮೂಲ ಜಾತಿ ಪ್ರಮಾಣ ಪತ್ರ ಮತ್ತು ಮೂಲ ಆದಾಯ ಪ್ರಮಾಣ ಪತ್ರಗಳ (ಸೂಕ್ತ ಅಧಿಕಾರಿಯಿಂದ ಪರಿಶೀಲಿಸಿ ಸಹಿ ಮಾಡಿರುವ) ನಕಲು ಪ್ರತಿಗಳನ್ನು ಲಗತ್ತಿಸಬೇಕು. ಇಲ್ಲವಾದರೆ ಅರ್ಜಿಯು ಸಾಮಾನ್ಯ ವರ್ಗಕ್ಕೆ ಸೇರಿದುದೆಂದು ಪರಿಗಣಿಸಲಾಗುತ್ತದೆ. ಇದಕ್ಕಾಗಿ ನಂತರ ಸಲ್ಲಿಸುವ **ಪ್ರಮಾಣ ಪತ್ರಗಳನ್ನು ಒಪ್ಪಿಕೊಳ್ಳಲಾಗುವುದಿಲ್ಲ.**

೪. **ಆಯ್ಕೆಯ ವಿಧಾನ:** ಅಭ್ಯರ್ಥಿಗಳನ್ನು ಸಂಪೂರ್ಣವಾಗಿ ಅರ್ಹತೆ/ಪ್ರತಿಭೆಯ ಆಧಾರದ ಮೇಲೆ ಮತ್ತು ರಾಜ್ಯ ಸರ್ಕಾರದ ಮೀಸಲಾತಿಯ ನಿಯಮಗಳ ಆಧಾರದ ಮೂಲಕ **ನೇರ ಸಂದರ್ಶನ** ಮಾಡಿ ಆಯ್ಕೆ ಮಾಡಿಕೊಳ್ಳಲಾಗುವುದು.

ಈ ಕೆಳಕಂಡ ಪ್ರಮಾಣ ಪತ್ರಗಳ ನಕಲು ಪ್ರತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.

(ಅ) ಎಸ್.ಎಸ್.ಎಲ್.ಸಿ. ಅಂಕಪಟ್ಟಿ.

(ಆ) ಪದವಿ ಪೂರ್ವ ತರಗತಿಯ (ಪಿ.ಯು.ಸಿ.) ಅಂಕಪಟ್ಟಿ.

(ಇ) ಇತ್ತೀಚಿನ ಸರ್ಕಾರಿ ಆದೇಶದ ಪ್ರಕಾರ ಜಾತಿ ಮತ್ತು ವರಮಾನ ಪ್ರಮಾಣ ಪತ್ರಗಳ ನಕಲು ಪ್ರತಿಗಳು. ಇವನ್ನು ಸಂಬಂಧಿಸಿದ ಅಧಿಕಾರಿಗಳು ಪರಿಶೀಲಿಸಿ ಒಪ್ಪಿರಬೇಕು.

(ವಿ.ಸೂ. ಸಾಮಾನ್ಯ ವರ್ಗಕ್ಕೆ ಸೇರಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಇದು ಅನ್ವಯಿಸುವುದಿಲ್ಲ)

(ಈ) ವರ್ಗಾವಣೆ ಪ್ರಮಾಣ ಪತ್ರ.

(ಉ) ನಡತೆಯ ಅಥವಾ ಯೋಗ್ಯತಾ ಪ್ರಮಾಣ ಪತ್ರ.

(ಊ) ಆಧಾರ್ ಪತ್ರದ ನಕಲು

**ಸೂಚನೆ** (೧) ಪ್ರವೇಶಾತಿ ಸಮಯದಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ಎಲ್ಲಾ ಪ್ರಮಾಣ ಪತ್ರಗಳ ಮೂಲ ಪ್ರತಿಯನ್ನು ಹಾಜರುಪಡಿಸಬೇಕು. ಇಲ್ಲದಿದ್ದರೆ ಪ್ರವೇಶಾತಿ ರದ್ದಾಯಿತೆಂಬುದಾಗಿ ಪರಿಗಣಿಸಲಾಗುತ್ತದೆ. ಅಭ್ಯರ್ಥಿಯನ್ನು ತರಗತಿಗೆ ಸೇರಿಸಿಕೊಳ್ಳುವುದು ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಶಿಸ್ತು ಪಾಲನೆಯ/ಸುಗ್ರೀವಾಜ್ಞೆಗೆ (೧೯೮೯) ಒಳಪಟ್ಟಿರುತ್ತದೆ.

**ಸೂಚನೆ (2)**

ಸರ್ಕಾರದ ವಿದ್ಯಾರ್ಥಿ ವೇತನವನ್ನು ಪಡೆಯುವ ಪ.ಜಾ/ಪ.ವರ್ಗ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ವರಮಾನ ರೂ.2,50,000/– ಗಳಿಗಿಂತ ಕಡಿಮೆ ಹೊಂದಿರಬೇಕು ಹಾಗೂ ಸಾಮಾನ್ಯ ವರ್ಗ/ಹಿಂದುಳಿದ ವರ್ಗ/ ಪ್ರವರ್ಗ 1ರ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ವರಮಾನ ರೂ.1,00,000/– ಗಳಿಗಿಂತ ಕಡಿಮೆ ಹೊಂದಿರಬೇಕು. ಆದರೆ ಪೋಷಕರ ವರಮಾನ ಅಧಿಕವಾಗಿದ್ದರೆ, ಅಂತಹ ವಿದ್ಯಾರ್ಥಿಗಳು ಭಾರತ ಸರ್ಕಾರದ ವಿದ್ಯಾರ್ಥಿವೇತನ ಮಂಜೂರಾತಿಗೆ ಅರ್ಹರಾಗಿರುವುದಿಲ್ಲ. ಅರ್ಹರಾಗದ ವಿದ್ಯಾರ್ಥಿಗಳು ಪ್ರವೇಶಾತಿ ಸಮಯದಲ್ಲಿ ಪೂರ್ಣ ಪ್ರಮಾಣ ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ.

ಪೋಷಕರ ವರಮಾನ ಅಧಿಕವಾಗಿರುವ ವಿದ್ಯಾರ್ಥಿಗಳು ಮರುಪಾವತಿ ಬೇಕೆನಿಸಿದಲ್ಲಿ ಅದಕ್ಕಾಗಿ ರಚಿಸಲಾದ ಪರಿಶೀಲನಾ ಸಮಿತಿಯ ನಿರ್ದೇಶಕರು, ಕಾಲೇಜು ಶಿಕ್ಷಣ ಮಂಡಳಿ, ಬೆಂಗಳೂರು ಅವರಿಗೆ ಪ್ರಾಂಶುಪಾಲರ ಮೂಲಕ ಕಾರಣ ಸಹಿತ ಅರ್ಜಿ ಸಲ್ಲಿಸಿ ಅವರಿಂದ ಶುಲ್ಕ ಮರುಪಾವತಿ ಮಾಡಿಸಿಕೊಳ್ಳಲು ಅವಕಾಶವಿದೆ ಎಂದು ಸಮಾಜ ಕಲ್ಯಾಣ ಇಲಾಖೆ ತಿಳಿಸಿದೆ.

**ಸೂಚನೆ (3)**

**2018–19ನೇ ಸಾಲಿನ ಸ್ನಾತಕ ಪದವಿ ಹಾಗೂ ಸ್ನಾತಕೋತ್ತರ ಪದವಿ ಕೋರ್ಸುಗಳ ಪ್ರವೇಶಾತಿ ಶುಲ್ಕದ ವಿವರದ ಪಟ್ಟಿಯನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು.**

**ಮೈಸೂರು ವಿಶ್ವವಿದ್ಯಾನಿಲಯ ಕ್ರಾಫರ್ಡ್ ಭವನ ಚಿತ್ರ**

ಮೈಸೂರು ವಿಶ್ವವಿದ್ಯಾನಿಲಯ ಕ್ರಾಫರ್ಡ್ ಭವನ

**ಯುವರಾಜ ಕಾಲೇಜು ಅಮೃತ ಮಹೋತ್ಸವ ಸಭಾಂಗಣ ಹಾಗೂ ಅನ್ವಯಿಕ ವಿಜ್ಞಾನ ಪ್ರಯೋಗಾಲಯ ಸಂಕೀರ್ಣ ಚಿತ್ರ**

ಯುವರಾಜ ಕಾಲೇಜು ಅಮೃತ ಮಹೋತ್ಸವ ಸಭಾಂಗಣ ಹಾಗೂ ಅನ್ವಯಿಕ ವಿಜ್ಞಾನ ಪ್ರಯೋಗಾಲಯ ಸಂಕೀರ್ಣ

ಸಂಪರ್ಕಿಸಿ:
ಪ್ರಾಂಶುಪಾಲರ ದೂರವಾಣಿ: 0821–2419292
ಆಡಳಿತಾಧಿಕಾರಿಗಳ ದೂರವಾಣಿ: 0821–2419241
ಕಛೇರಿ ದೂರವಾಣಿ: 0821–2419240
ಈ ಮೇಲ್: principal_ycm@rediffmail.com
ವೆಬ್‌ಸೈಟ್: www.ycm.uni-mysore.ac.in